ಯಜುಸ್ಸಂಧ್ಯಾಭಾಷ್ಯವಿವರಣಂ

ಮಂಡಯಂ

ಆಹ್ವಾಧೊರಿ ನರಸಿಂಹಾಚಾರ್ಯರಿಂದ

ರಚಿತವಾದುದು

[ದ್ವಿತೀಯಮುದ್ರಣ.]

ಬೆಂಗಳೂರು ಸಿಟಿ

ಬಂಗಲೋರ್ ಪ್ರೆಸ್‌ನಲ್ಲಿ ಮುದ್ರಿಸಲ್ಪಟ್ಟಿತು

1930

Registered Copy Right

ಕ್ರಯ ೧ ಆಣೆ

ಶ್ರೀಃ

ದ್ವಿತೀಯಮುದ್ರಣ

ವಿಜ್ಞಾಪನೆ.

ಯಜುಸ್ಸಂಧ್ಯಾಭಾಷ್ಯವಿವರಣದ ಒಂದು ಸಾವಿರ ಪ್ರತಿಗಳೂ ಮುಗಿದು ಹೋಗಿ ಮತ್ತೆ ಅಚ್ಚಾಗಬೇಕಾಗಿ ಬಂದುದು ಸಂತೋಷಕರವಾದ ವಿಷಯ; ಅರ್ಥವನ್ನು ತಿಳಿದುಕೊಂಡು ಸಂಧ್ಯಾವಂದನೆಯನ್ನು ಮಾಡಬೇಕೆನ್ನುವ ಅಭಿಲಾಷೆಯು ಜನಗಳಲ್ಲಿ ಹೆಚ್ಚಾಗಿದೆಯೆಂದು ಇದರಿಂದಲೇ ವ್ಯಕ್ತವಾಯಿತು.

ಈ ಪುಸ್ತಕವನ್ನು ಬರೆದ ನನ್ನ ತಂದೆಗಳಾದ ಶ್ರೀ. ಶ್ರೀ. ಪ್ಲೀಡರ್ ಎಂ. ಎ. ನರಸಿಂಹಾಚಾರ್ಯರವರು ಇದು ಮುದ್ರಣವಾದ ಎರಡು ವರ್ಷ ಕಾಲದಲ್ಲೇ ಪರಂಧಾಮವನ್ನೈದಿದರು. ಪುಸ್ತಕವು ಇಷ್ಟು ಪ್ರಚಾರಕ್ಕೆ ಬಂದು, ಒಳ್ಳೆಯ ಅಭಿಪ್ರಾಯಗಳಿಂದ ಕೂಡಿ, ತಿರಿಗಿ ಮುದ್ರಣವಾಗುವ ಆನಂದವನ್ನು ಹೊಂದುವ ಯೋಗವನ್ನು ಅವರ ಮಕ್ಕಳಾದ ನಾವುಗಳು ಪಡೆದೆವು.

ಮೊದಲನೆಯ ಮುದ್ರಣವು ನಿವೃತ್ತ ಡೆಪ್ಯುಟಿ ಕಮಿಷನರ್ ಶ್ರೀಮಾನ್ ಎಂ. ಎ. ನಾರಾಯಣಯ್ಯಂಗಾರ್ಯರವರ ಸಹಾಯದಿಂದ ಆದಂತೆಯೇ, ಎರಡನೆಯ ಮುದ್ರಣವು ಅವರ ತಮ್ಮಂದಿರಾದ ಶ್ರೀಮಾನ್ ಎಂ. ಎ. ಶ್ರೀನಿವಾಸಯ್ಯಂಗಾರ್ಯರವರ ಸಹಾಯದಿಂದ ಆಗಿರುವುದು.

ಮೇಲುಗೋಟೆಯ ಶ್ರೀಯತಿರಾಜಮಠದ ಪೀಠವನ್ನು ಅಲಂಕರಿಸಿರುವ ಶ್ರೀ. ಶ್ರೀ. ಯತಿರಾಜ ಸ್ವಾಮಿಗಳೂ, ದಿವಾಂ

ಗಳಾದ ಲೋಕವಿಖ್ಯಾತರಾದ ಪ್ರೊಫೆಸರ್ ಎಂ. ರಂಗಾಚಾರ್ಯರವರೂ, ಆಸ್ಥಾನಮಹಾವಿದ್ವಾನ್ ಪಂಡಿತರತ್ನಂ ಕಸ್ತೂರಿ ಅಯ್ಯಂಗಾರ್ಯಸ್ವಾಮಿಗಳೂ ಈ ಪುಸ್ತಕದ ಪ್ರಾರಂಭದಲ್ಲಿ ಕೊಟ್ಟಿರುವ ಅಭಿಪ್ರಾಯಗಳನ್ನು ಸಮಸ್ತ ಜನರ ಗಮನಕ್ಕೆ ತಂದಿರುವೆವು.

ಬೆಂಗಳೂರು
೨೫-೧-೧೯೩೦

ಅವತಾರಿಕೆ.

ಸಂಧ್ಯಾವಂದನೆ ಮಾಧ್ಯಾಹ್ನಿಕಗಳೆಂಬುವು ಅವುಗಳು ಪ್ರತಿದಿನವೂ ಎರಡು ಸಂಧಿಗಳಲ್ಲಿಯೂ ಮಧ್ಯಾಹ್ನದಲ್ಲಿಯೂ ಮಾಡಬೇಕಾದ ದೇವತಾನುಸಂಧಾನವು; ಈ ವೇದೋಕ್ತವಾದ ಕರ್ಮಗಳನ್ನು ದ್ವಿಜರೆಲ್ಲರೂ ಮಾಡಿಯೇ ತೀರಬೇಕೆಂದು ಹಿಂದಿನ ಕಟ್ಟಳೆಯನ್ನು ಮಾಡಿದ್ದಾರೆ; ಇದನ್ನು ಮಾಡದಿರುವ ಯಾವನಾಗಲಿ ಅಶುಚಿಯಾಗುವನೆಂತಲೂ, ಇತರ ವೈದಿಕಕರ್ಮಗಳನ್ನು ಮಾಡುವುದಕ್ಕೆ ಯೋಗ್ಯನಲ್ಲವೆಂತಲೂ, ಬೇರಾವ ಕರ್ಮಗಳನ್ನು ಮಾಡಿದರೂ ಆ ಫಲವನ್ನು ಅನುಭವಿಸುವನಲ್ಲವೆಂತಲೂ ವ್ಯಾಸಸ್ಮೃತಿಯಲ್ಲಿ ಹೇಳಿರುವುದು. ಸಂಧ್ಯಾವಂದನಾದಿಕರ್ಮಗಳನ್ನು ಮಾಡದಿರುವವನನ್ನು ವೇದಗಳು ಕೂಡ ಪುನೀತನನ್ನಾಗಿ ಮಾಡಲಾರವೆಂತಲೂ ಉಕ್ತವಾಗಿರುವುದು.

ಸಕಲಲೋಕಗಳನ್ನೂ ಪರಿಪಾಲಿಸುತ್ತ, ಬೆಳಕನ್ನು ಕೊಟ್ಟು, ಇದು ಒಳ್ಳೆಯದು, ಇದು ಕೆಟ್ಟುದೆಂಬ ಜ್ಞಾ

ಗಳನ್ನು ತೋರಿಸಿ, ಅವ್ಯಕ್ತವಾದ ಪಂಚಭೂತಗಳ ಮೂಲಕ ತನ್ನ ಮಹಿಮೆಯನ್ನು ಪ್ರಕಟಿಸುತ್ತಿರುವ ಆ ಪರಮಾತ್ಮನ ಎಣೆಯಿಲ್ಲದ ಕರುಣಾಗುಣವನ್ನು ಪ್ರತಿನಿತ್ಯವೂ ಒಂದೆರಡಾವರ್ತಿಯಾದರೂ ಜನರು ನೆನೆಯುತ್ತಿರುವುದು ಉಚಿತವೇ ! ಒಂದೆರಡು ಕಾಸುಗಳನ್ನು ಕೊಟ್ಟು ಪಾಲಿಸುವ ಕೇವಲ ಮನುಷ್ಯಮಾತ್ರನಾದವನ ಸೇವೆಗೆ ಹೆದರಿ, ಇತರ ಕೆಲಸಗಳನ್ನಾದರೂ ಬಿಟ್ಟು, ಹೊಟ್ಟೆಗಾಗಿ ಅವನ ಸೇವೆಯನ್ನು ಮಾಡುವ ನಾವು, ಚರಾಚರಾತ್ಮಕವಾದ ಪ್ರಪಂಚವೆಲ್ಲವನ್ನೂ ಸೃಷ್ಟಿಸಿ ನಾನಾಭಾಗ್ಯವನ್ನು ಕೊಟ್ಟು ಪಾಲಿಸುವ ಆ ಪರಮಾತ್ಮನನ್ನು ಎಷ್ಟು ಸೇವೆ ಮಾಡಿದರೂ ಸ್ವಲ್ಪವೇ.

ಸಂಧ್ಯಾವಂದನೆಯನ್ನು ಮಾಡದಿದ್ದರೆ ಹಿರಿಯರ ಅಪವಾದಕ್ಕೆ ಗುರಿಯಾಗುವೆವೆಂಬ ಭಯದಿಂದ ಕೆಲವರು ಮಂತ್ರಗಳನ್ನು ಹೇಳಿಕೊಂಡು ಅಷ್ಟು ನೀರನ್ನೆರಚುವರು. ಹೀಗೆ ಮಾಡುವುದು ವಂದನೆಯೆನಿಸುವುದೇ ? ಎಲ್ಲ ಕಾರ್ಯಗಳಿಗಿಂತಲೂ ಮುಖ್ಯವಾದ ದೇವತಾನಮಸ್ಕಾರದಲ್ಲಿಯೇ ಇಷ್ಟು ಅಲಕ್ಷ್ಯವು ಅನಾದರವೂ ಉಂಟಾಗಬಹುದೇ ?

ನಮಗೆ ಎಲ್ಲರಿಗೂ ವೇದಮಂತ್ರಗಳಿಂದಲೇ ಏಕೆ ದೇವರನ್ನು ಸ್ತುತಿಸಬೇಕು ; ನಮ್ಮ ದೇಶಭಾಷೆಯಿಂದಲೇ ಏಕೆ ಸ್ತುತಿಸಬಾರದು ಎಂದು ಸಹಜವಾಗಿ ಕೆಲವರು ಆಕ್ಷೇಪಿಸಬಹುದು. ಕೇವಲಭಕ್ತಿಯುಕ್ತರಾಗಿ ಭಗವತ್ಸಾನ್ನಿಧ್ಯವನ್ನು ಹೊಂದಿದ್ದ ಹಿಂದಣಕಾಲದ ಋಷಿಗಳು ಸುಸ್ವರವರ್ಣಗಳಿಂದ ಕೂಡಿದ ಮಂತ್ರಗಳಿಂದ ಪರಮಾತ್ಮನ ಗುಣಗಳನ್ನು ಕೊಂಡಾಡಿರುವರು ; ಆ ಮಂತ್ರಗಳ ಉಚ್ಚಾರಣೆ ಮಾಡುವುದರಿಂದ ಉಂಟಾಗುವ ಶ್ರೇಯಸ್ಸು, ಕೇವಲಶುಷ್ಕವಾದ ನಮ್ಮ ಮಾತುಗಳಿಂದ ಉಂಟಾಗುವುದಿಲ್ಲ. ಎಂತಲೇ ಆ ಮಂತ್ರಗಳಲ್ಲಿ ಇರುವ ಶಕ್ತಿಯು ಭಾಷಾಂತರದಲ್ಲಿ ಉಂಟಾಗುವುದಿಲ್ಲ.

ಅರ್ಥವನ್ನು ತಿಳಿಯದೆ, ತಿಳಿಯುವಂತೆ ಸಂಧ್ಯಾವಂದನಾದಿಗಳನ್ನು ಮಾಡಿಯೂ ಫಲವಿಲ್ಲವೆಂದು ಹಿರಿಯರ ಅಭಿಪ್ರಾಯ

ನಡೆಯಬಹುದಾಗಿಯುಳ್ಳ ಸಾಧಕರಿಗಾಗಿ ಮಹರ್ಷಿಶ್ರೇಷ್ಠರು ಗಳು ಈ ಮಂತ್ರಗಳ ಅರ್ಥವನ್ನರಿತು. ಮಂತ್ರತತ್ತ್ವಗಳಾದ ದೇವತೆಗಳು ಎನ್ನು ಭಕ್ತ್ಯತಿಶಯದಿಂದ ಭಗವಂತನನ್ನು ಹೊಗಳಿದರು. ಆ ಭಗವಂತನ ಮಹಾತ್ಮ್ಯವೆಂತಹುದು ಎಂ ಬುದನ್ನು ತಿಳಿದುಕೊಳ್ಳಲು ಎಂದೊಂದಪೇಕ್ಷೆಯಿಂದ ಇಲ್ಲಿ ಸೂಚಿತವಾದ ನಾಲ್ಕು ಪುರುಷಸೂಕ್ತಾದಿಮಂತ್ರಗಳಿಗೆ ಪ್ರಾಚೀನರ ವ್ಯಾಖ್ಯಾನಗಳನ್ನನುಸರಿಸಿ ಆ ಅಭಿಪ್ರಾಯಗಳನ್ನು ಕನ್ನ ಡದ ಭಾಷಾಂತರದಲ್ಲಿ ಬರೆದಿರುವೆನು.

ಇದು ನನ್ನ ಪ್ರಥಮಪ್ರಯತ್ನವಾದುದರಿಂದಲೂ, ಇದ ರಲ್ಲಿ ಕೇವಲಗೌರವಾರ್ಥವಾದುದರಿಂದಲೂ, ಇದರಲ್ಲಿ ಕಂಡು ಬರಬಹುದಾದ ಹಲವು ದೋಷಗಳನ್ನು ಮರೆತು, ಇದ ರಲ್ಲಿನ ಗುಣಲೇಶವನ್ನು ಗ್ರಹಿಸಬೇಕೆ ನಾನು ಸ್ವತಃ ಪ್ರ ಕಾಶಕನೆಂದು ಭಾವಿಸುವೆನು.

ಇತಿ

ಮಂಗಳಂ ಅಣ್ಣಪ್ಪಗೌಡ ನರಸಿಂಹಾಚಾರ್ಯ.

ಬೆಂಗಳೂರು, 16-9-11.

ಶ್ರೀ ಯದುಗಿರಿ ಯತಿರಾಜಮಠದ ಪ್ರಶಸ್ತಿಪತ್ರವು.

ಶ್ರೀಮತೇ ರಾಮಾನುಜಾಯ ನಮಃ

ಯಜುರ್ವೇದಿಗಳ ಸಂಧ್ಯಾವಂದನವಿಧಾನವನ್ನು ತಿಳಿಸುವ ಈ ಪುಸ್ತಕವು ಸಂಸ್ಕೃತಭಾಷೆಯನ್ನು ತಿಳಿಯದವರಿಗೆ ಬಹಳ ಉಪಕಾರವಾಗಿರುವುದು. ದೇಶಭಾಷೆಯಾದ ಕನ್ನಡದಲ್ಲಿ ಮಂತ್ರಗಳಿಗೆ ಸರಳವಾಗಿ ಅರ್ಥವು ನಿರೂಪಿತವಾಗಿ, ನಾನಾ ತರಹ ವಿಧಾನವು ಇದರಲ್ಲಿ ಚೆನ್ನಾಗಿ ತೋರಿಸಲ್ಪಟ್ಟಿರುವುದು.

“ಅರ್ಥವನ್ನು ತಿಳಿಯದೆ ಬರಿ ಬಾಯಿಪಾಠದಿಂದ ಭಾರವನ್ನು ಹೊತ್ತಿರುವನು” ಎಂದು ಹೇಳ್ವ ಮಾತನ್ನು ಹೋಗಲಾಡಿಸಲಿಗೆ ಇದು ಬಹಳ ಸಹಾಯವಾಗಿರುವುದು.

ಬಾಲ್ಯ ಮೊದಲು ವಿಪ್ರರುಗಳು ಸಂಧ್ಯಾವಂದನಾದಿಗಳನ್ನು ಕಲಿತು, ಸ್ವಧರ್ಮವನ್ನು ಆಚರಿಸಿದರೂ, ವೇದಮಂತ್ರಗಳ ಸ್ವರೂಪವಿನಿಯೋಗಗಳನ್ನು ಸುಶರಾಂ ತಿಳಿಯದೆಯೇ ಇರುವುದೇ ಮೊದಲಾದ ಪ್ರಶ್ನೆ ಮಾತುಗಳಿಗೆ ಕಾರಣವಾಗಿರುವುದು.

ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿಯೇ ಈ ಪುಸ್ತಕವನ್ನು ಬರೆದ ಮಹಾಶಯರು ಶಿಕ್ಷಾಕರ್ಮಾನುಷ್ಠಾನಗಳಲ್ಲಿ ಶ್ರದ್ಧಾವಂತರಾಗಿ, ಗುರುಮುಖದಿಂದ ಮಂತ್ರಾರ್ಥವಿಧಾನಗಳನ್ನು ಚೆನ್ನಾಗಿ ಅರಿತು, ಪರೋಪಕಾರಬುದ್ಧಿಯಿಂದ ಬರೆದಿರುವ ಈ ಪುಸ್ತಕದಲ್ಲಿ ಯಾವ ಬಗೆಯಾದ ಕೊರತೆಯೂ ಇರುವುದಿಲ್ಲ.

ಈ ಗ್ರಂಥಕಾರರು ಪರಂಪರಾಗತವನ್ನು ತಿಳಿದು ಶಿಷ್ಯರಾಗಿರುತ್ತಾರಾಗ್ಯೂ ಇವರ ಪ್ರತಿಭಾಸಂಪನ್ನವಾದ ಈ ಪುಸ್ತಕದ ಕರ್ಮಾನುಷ್ಠಾನದಲ್ಲಿ ಶ್ರದ್ಧೆಯುಳ್ಳವರಿಗೆ ಬಹ

[illegible]

ಶುಕ್ಲ ಸಂವತ್ಸರದ [illegible] [illegible] [illegible] [illegible] [illegible] ಮಲ್ಲೇಶ್ವರ, ಬೆಂಗಳೂರು.	[illegible] (ಎಂದು ಗ್ರಂಥ[illegible] ಶ್ರೀ [illegible]ದಾಸರು ಗಳ [illegible] ಇದೆ.)

[illegible]

[illegible]	[illegible]
[illegible]	[illegible]

Triplicane,
26-11-1911.

I have gone through Mr. Annadhorai Narasimhacharya's **Yajus-Sandhya-Bhashya-Vivarana** and am glad to be able to state that it gives in clear and lucid Kanarese the higher import of the morning, midday and evening Brahmanical prayers according to the Krishna-Yajurveda. The value of the booklet consists in the higher Vedantic thought which is, in accordance with the orthodox commentators, evolved out of the ancient Vedic **Manthras** and ritual formulas; and I have no doubt that the booklet will prove to be of considerable value in popularising the higher import of India's traditional Brahmanical daily prayers.

M. Rangacharya,
Professor of Sanskrit.

ಓಂ.

ಯಜುಸ್ಸಂಧ್ಯಾಭಾಷ್ಯವಿವರಣಂ.

ಪ್ರಾತಸ್ಸಂಧ್ಯಾವಂದನೆಯು.

ಅಧಿಕಾರಿಯು ಸ್ನಾನವನ್ನು ಮಾಡಿ, ಮಡಿಯುಟ್ಟು, ನಾಮವನ್ನು ಧರಿಸಿ, ಪೂರ್ವಾಭಿಮುಖನಾಗಿ ಕುಳಿತು, ಸಂಧ್ಯಾವಂದನೆಯನ್ನು ಮಾಡುವುದು.

ಅದರ ಕ್ರಮವೆಂತೆಂದರೆ:

೧. ಮೊದಲು ಆಚಮನಗಳೆರಡನ್ನು ಮಾಡುವುದು. ಆಚಮನ ಮಂತ್ರ:—

ಕೇಶವಾಯನಮಃ, ನಾರಾಯಣಾಯನಮಃ, ಮಾಧವಾಯನಮಃ, ಗೋವಿಂದಾಯನಮಃ, ವಿಷ್ಣವೇನಮಃ, ಮಧುಸೂದನಾಯನಮಃ, ತ್ರಿವಿಕ್ರಮಾಯನಮಃ, ವಾಮನಾಯನಮಃ, ಶ್ರೀಧರಾಯನಮಃ, ಹೃಷೀಕೇಶಾಯನಮಃ, ಪದ್ಮನಾಭಾಯನಮಃ, ದಾಮೋದರಾಯನಮಃ.

ಕೇಶವನೇ ಮೊದಲಾದ ಹನ್ನೆರಡು ಹೆಸರುಗಳೂ ಭಗವಂತನ ನಾಮಗಳು; ಈ ದ್ವಾದಶನಾಮಗಳನ್ನು ಧ್ಯಾನಿಸುತ್ತ, ಮೊದಲನೆಯ ಮೂರು ನಾಮಗಳಿಗೂ, ಒಂದೊಂದು ನಾಮೋಚ್ಚಾರಣೆಯಾದನಂತರವೂ ಒಂದೊಂದಾವೃತ್ತಿ ತೀರ್ಥವನ್ನು ತೆಗೆದುಕೊಂಡು, ಮಿಕ್ಕ ನಾಮಗಳನ್ನು ಹೇಳುವಾಗ ಕರನ್ಯಾಸಗಳನ್ನು ಮಾಡುವುದು.

ಸಂಧ್ಯಾವಂದನಾಧಿಕಾರಿಯು ಆಚಮನಮಂತ್ರಗಳನ್ನು ಹೇಳಿ, ತಾನು ಭಗವಂತನಿಗೆ ಶೇಷಭೂತನೆಂದು ತಿಳಿದು ಅವನನ್ನು ಧ್ಯಾನಿಸುತ್ತ ಆಚಮನವನ್ನು ಮಾಡಿದರೆ ಆರೋಗ್ಯವೂ ಅಂತಶ್ಶುದ್ಧಿಯೂ ಕೈಗೂಡುವುದು.

೨. ಬಳಿಕ ಒಂದು ಪ್ರಾಣಾಯಾಮವನ್ನು ಮಾಡುವನು. ಪ್ರಾಣಾಯಾಮಮಂತ್ರ—

ಓಂಭೂಃ, ಓಂಭುವಃ, ಓಂಸುವಃ, ಓಂಮಹಃ, ಓಂಜನಃ, ಓಂತಪಃ, ಓಂಸತ್ಯಂ, ಓಂತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿ, ಧಿಯೋಯೋನಃ ಪ್ರಚೋದಯಾತ್, ಓಂಆಪೋಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಂ.

ಈ ಮಂತ್ರದಲ್ಲಿ **ಓಂಭೂಃ** ಎಂಬುದರಿಂದ **ಓಂ ಸತ್ಯಂ** ಎಂಬ ವರೆಗೂ ಇರುವ ಏಳು ಪದಗಳಿಗೂ "ವ್ಯಾಹೃತಿ" ಗಳೆಂದು ಹೆಸರು.

ಓಂ ತತ್ಸವಿತುರ್ವರೇಣ್ಯಂ ಎಂಬುದರಿಂದ **ಪ್ರಚೋದಯಾತ್** ಎಂಬ ವರೆಗೂ ಬರುವ ಇಪ್ಪತ್ತನಾಲ್ಕು ಅಕ್ಷರಗಳಿಂದ ಕೂಡಿರುವ ಮಂತ್ರಕ್ಕೆ "ಗಾಯತ್ರೀ" ಎಂದು ಹೆಸರು.

ಓಂ ಆಪೋಜ್ಯೋತೀ ಎಂಬುದರಿಂದ **ಸುವರೋಂ** ಎಂಬುದೇ ಕಡೆಯದಾಗಿ ಉಳ್ಳ ಮಂತ್ರವು "ಗಾಯತ್ರೀಶಿರಸ್ಸು" ಎಂದೆನ್ನಿಸುವುದು.

ಓಂ ಎಂದು ಮಂತ್ರದ ಆದಿಯಲ್ಲಿ ಬರುವ ಶಬ್ದವು "ಪ್ರಣವ" ಅಥವಾ "ಓಂಕಾರ" ವೆನ್ನಿಸುವುದು.

ಭೂ ಎಂಬುದರಿಂದ **ಸತ್ಯಂ** ಎಂಬುದರ ವರೆಗಿನ ಏಳು ಪದಗಳಿಗೂ ಕ್ರಮವಾಗಿ ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕವೆಂಬ ಮೇಲಿನ ಏಳು ಲೋಕಗಳೆಂದು ಅರ್ಥವು.

ಗಾಯತ್ರಿಯ ಅರ್ಥವು.

ಯಃ ಯಾವ, ನಃ-ನಮ್ಮ, ಧಿಯಃ-ಬುದ್ಧಿಗಳನ್ನು, ಕಾರ್ಯಗಳು ನಾನಾವಿಷಯಗಳಲ್ಲಿ ಉಪಯೋಗವಾಗುವುದಕ್ಕೆ ಬೇಕಾದ ವಿಷಯಗಳನ್ನು, ಪ್ರಚೋದಯಾತ್ ಉಂಟುಮಾಡುವನೋ, ಪ್ರೇರಿಸುವನೋ, ತತ್-ಅಪ್ರಸಿದ್ಧನಾದ, ಸವಿತುಃ ಸೃಷ್ಟಿಕರ್ತನಾದ, ದೇವಸ್ಯ-ಸ್ವಪ್ರಕಾಶಸ್ವರೂಪನ, ದಿವ್ಯತೇಜಃಕಾಂತಿಯಿಂದ ಕೂಡಿದವನ, ಜ್ಞಾನಾನಂದಸ್ವರೂಪನಾದ ಜಗತ್ತಿನ ಸೇವೆಯಿಂದ ಪರಿಶೋಭಿಸುತ್ತಿರುವನ, ವರೇಣ್ಯಂ-ಉತ್ತಮವಾದ, ಮಹಾತ್ಮ್ಯದಿಂದಲೂ ಪ್ರಾರ್ಥನ

೨೨. ಯೋಗ್ಯವಾದ. ಭರ್ಗಃ-ಸ್ವರೂಪವನ್ನು, ತೇಜಸ್ಸನ್ನು, ಧೀಮಹಿ—(ಧ್ಯಾಯೇಮಹಿ)-ಧ್ಯಾನಮಾಡುತ್ತೇವೆ; ಓಂ-ಪರಬ್ರಹ್ಮವು, ಭೂಃ-ಜಲಗಳು, ಪೃಥ್ವಿ ಅಗ್ನಿ ಮೊದಲಾದ ಭೂತಗಳು, ರಸಃ-ರಸ ಮೊದಲಾದ ವಿಷಯಗಳು, ಅಮೃತಂ-ಶಾಶ್ವತ, ಬ್ರಹ್ಮ-ಶ್ರೇಷ್ಠವಿದು, ಭೂರ್ಭುವಸ್ಸುವಃ-ಭೂಭುವನಸ್ಸುವರ್ಲೋಕಗಳು, (ಇವುಗಳೆಲ್ಲವೂ) ಓಂ-ಪರಬ್ರಹ್ಮವು.

ಪ್ರಣವಾರ್ಥವೇನೆಂದರೆ ಜಪಿಸುವವನ್ನು ಕಾಪಾಡುವುದು. 'ಓಂ' ಎಂಬುದರಲ್ಲಿ ಅ, ಉ, ಮ ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ ಅಕಾರವು 'ಅವ ರಕ್ಷಣೇ' ಎಂಬ ಧಾತುವಿನಿಂದ ಸರ್ವವನ್ನೂ ಪಾಲಿಸುವ ಭಗವಂತನನ್ನು ಹೇಳುತ್ತದೆ. ಅಕಾರವು ಕಾರಣವಾಚಕವು; ಜ್ಞಾನ ಶಕ್ತಿ, ಸುಖಾದಿಗಳು ಕಾರಣತ್ವಕ್ಕೆ ಉಪಯುಕ್ತವಾದುವುಗಳು; ದಯಾ ವಾತ್ಸಲ್ಯಾದಿಗಳು ರಕ್ಷಣತ್ವಕ್ಕೆ ಉಪಯುಕ್ತವಾದುವು; ಈ ಕಲ್ಯಾಣ ಗುಣಗಳೂ ಭಗವಂತನಲ್ಲಿ ಇರುವುವು. ಉಕಾರವು ಇಲ್ಲಿ ಅವಧಾರಣಾರ್ಥವು; ಉಕಾರಕ್ಕೆ ಅನ್ಯಯೋಗವ್ಯವಚ್ಛೇದವು; ಅವಧಾರಣೆಯೆಂದರೆ ನಿಯತವಾಗಿ ಹೇಳುವುದೆಂದು ತಾತ್ಪರ್ಯ; ಜೀವನು ಭಗವಂತನಿಗೊಬ್ಬನಿಗೇ ಶೇಷಭೂತನೆಂಬುವುದು ಅಭಿಪ್ರಾಯ; ಮಕಾರವು ಜೀವವಾಚಕವು; ಇದು ಇಪ್ಪತ್ತೈದನೆಯ ಅಕ್ಷರ; ಇದರಿಂದ ಜೀವನು ಇಪ್ಪತ್ತು ನಾಲ್ಕು ತತ್ವಗಳಿಗಿಂತಲೂ ಬೇರೆಯಾದವನೆಂದು ಅಭಿಪ್ರಾಯ; "ಮನ-ಜ್ಞಾನೇ" ಅಥವಾ "ಮನು-ಅವಬೋಧನೇ" ಎಂಬ ಧಾತುವಿನಿಂದ ಹುಟ್ಟಿದ ಮಕಾರಕ್ಕೆ ಜ್ಞಾನಸ್ವರೂಪವು ಹೇಳಲ್ಪಟ್ಟಿತು. ಇದರಿಂದ ಮಕಾರವಾಚ್ಯನಾದ ಜೀವನು ಜ್ಞಾನಸ್ವರೂಪನೆಂದಾಯಿತು; 'ಗಾಯಂತಂ ತ್ರಾಯತೇ' ಎಂದರೆ ಜಪಿಸುವವನನ್ನು ಕಾಪಾಡುವುದು ಎಂದು 'ಗಾಯತ್ರೀ' ಎಂಬುದರ ಅರ್ಥ. ಸರ್ವವನ್ನು ಪ್ರಕಾಶಪಡಿಸುವುದಕ್ಕೆ 'ಭರ್ಗಃ' ಎಂದು ಹೆಸರು. ಇದು ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ತೇಜಸ್ಸು. 'ದಿವ್-ಕ್ರೀಡಾಯಾಂ' ಎಂಬ ಧಾತುವಿನಿಂದ ಉತ್ಪನ್ನವಾದ ದೇವ ಶಬ್ದಕ್ಕೆ ಭಕ್ತರ ನೆನೆಯುವರ ಮನದಲ್ಲಿ ಕ್ರೀಡಿಸುವ ಭಗವಂತನೆಂದು ತಾತ್ಪರ್ಯ; ಜಲ ಮುಂತಾದ ಮನ್ವಂತರಗಳನ್ನು ಹೀಗೆ ಆಟವಾ

ದನು ಪಶ್ಚಿಮದಿಂದ ಕಟ್ಟಿ, ಆಡಿಸುತ್ತಾನೆಯೋ ಹಾಗೆಯೇ ಭಗವಂತನು ಜೀವರನ್ನು ಪಾಪಪಾಶದಿಂದ ಕಟ್ಟಿ, ಪ್ರೇರಿಸುತ್ತಾನೆಂದು ಹೇಳುವುದು. ಗಾಯತ್ರೀ ವಿದ್ಯೆಯ ಅತ್ಯಂತವಿಸ್ತಾರ ಪ್ರಬಂಧಗಳು ಸಕಲ ವಸ್ತುಗಳೂ ಪರಮಾತ್ಮನಲ್ಲಿವೆ ಇವೆ ಎಂಬುದನ್ನು ತೋರಿಸುತ್ತವೆ. ವ್ಯಾಹೃತಿಗಳು ಜಗತ್ಕಾರಣನಾದ ದೇವನು ಭಗವಂತನೆಂಬುದನ್ನು ತಿಳಿಸುತ್ತವೆ.

ಪ್ರಾಣಾಯಾಮವು ಯೋಗಾಭ್ಯಾಸಕ್ಕೆ ನಾಲ್ಕನೆಯ ಅಂಗವಾಗಿರುತ್ತದೆ. ಇದನ್ನು ಮಾಡುವುದರಿಂದ ಆಯುಸ್ಸು ಆರೋಗ್ಯವೂ ಬುದ್ಧಿಯೂ ಹೆಚ್ಚುತ್ತವೆ. ಜೀವನು ಪರಮಾತ್ಮನಿಗೆ ಶರೀರಭೂತನಾದುದರಿಂದ, ಪರಮಾತ್ಮನು ಆತ್ಮನಿಗೆ ನಿಯಾಮಕನೆಂದೂ ಪ್ರಣವಕ್ಕೆ ಅರ್ಥವು; 'ಕಾರಣಂ ತು ಧ್ಯೇಯಃ' ಎಂದು ಜಗತ್ಕಾರಣಭೂತನಾದ ದೇವನೇ ಉಪಾಸ್ಯನೆಂಬ ಅರ್ಥ ಗಾಯತ್ರಿಯನ್ನು ಜಪಿಸುವವನು ತನ್ನ ಅನುಷ್ಠಾನದ ಮೂಲಕ ತೈಲಧಾರೆಯಂತೆ ಅವಿಚ್ಛಿನ್ನಸ್ಮೃತಿಸಂತಾನರೂಪವಾದ ಭಕ್ತಿಯೋಗವನ್ನು ತೋರಿಸುತ್ತಾನೆ. ಸೂರ್ಯಮಂಡಲಾಂತರ್ವರ್ತಿಯಾದ ತೇಜೋರೂಪಿಯಾದ ಭಗವಂತನನ್ನು ಧ್ಯಾನಿಸಬೇಕೆಂಬುದೇ ಗಾಯತ್ರೀಜಪದ ಪ್ರಯೋಜನ.

೩. ಸಂಕಲ್ಪವು:

ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ ಪ್ರಾತಸ್ಸಂಧ್ಯಾವಂದನಂ ಕರಿಷ್ಯೇ. ಎಂದರೆ ಭಗವಂತನ ಅಪ್ಪಣೆಯ ಮೇರೆಗೆ ಅವನ ಸೇವಾರೂಪವಾದ ಬೆಳಗಿನ ಸಂಧ್ಯಾವಂದನೆಯನ್ನು ಮಾಡುವೆನು ಎಂದರ್ಥ.

ಸಂಕಲ್ಪವೆಂದರೆ — ಯಾವ ಕೆಲಸವನ್ನು ಮಾಡುವುದೋ ಅದನ್ನು ಮಾಡುವೆನೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಳ್ಳುವುದೆಂದು ಅರ್ಥವಾಗುವುದು.

೪. ಪ್ರೋಕ್ಷಣವು. ಇದರ ಮಂತ್ರ —

ಆಪೋಹಿಷ್ಠಾ ಮಯೋಭುವಃ, ತಾನ ಊರ್ಜೇ ದಧಾತನ, ಮಹೇರಣಾಯ ಚಕ್ಷಸೇ, ಯೋವಃ ಶಿವತಮೋ ರಸಃ, ತಸ್ಯ ಭಾಜಯತೇಹ ನಃ, ಉಶತೀರಿವ ಮಾತರಃ, ತಸ್ಮಾ ಅರಂಗಮಾಮವೋ ಯಸ್ಯ ಕ್ಷಯಾಯ ಜಿನ್ವಥ, ಆಪೋ ಜನಯಥಾ ಚ ನಃ.

ಹೇ ಆಪಃ—ಎಲೈ ಜಲಗಳೇ, ಪರಮಾತ್ಮನೇ. (ನೀವು) ಮಯೋಭುವಃ-(ದರ್ಶನಸ್ಪರ್ಶನ ಸ್ನಾನಪಾನಾದಿಗಳಿಂದ) ಸುಖಕ್ಕೆ ಕಾರಣವಾಗಿ, ಸ್ಥ (ಸ್ಥ)-ಆಗುತ್ತೀರಲ್ಲವೆ! ತಾಃ-ಆ ನೀವು, ನಃ-ನಮಗೆ, ಮಹೇ (ಮಹತೇ)-ದೊಡ್ಡದಾದ, ರಣಾಯ (ರಮಣೀಯವಾದ)-ಚೆನ್ನಾಗಿರುವ, ಚಕ್ಷಸೇ (ಇಂದ್ರಿಯವಾದ)—ಇಂದ್ರಿಯಕ್ಕೋಸುಗ, ಊರ್ಜೇ (ಆಹಾರಂ)-ಅನ್ನವನ್ನು, ದಧಾತನ-ಕೊಡಿರಿ (ವಿಧಾನಮಾಡಿರಿ) ನಃ-ನಮಗೆ, ಶಿವತಮಃ-ಮಂಗಳಕರವಾದ, ಯಃ-ಯಾವ, ರಸಃ-ರಸವಾಗಿರುವುದು ಇರುವುದೋ, ಇಹ-ಈ ಲೋಕದಲ್ಲಿ (ಈ ಜನ್ಮದಲ್ಲಿ), ನಃ-ನಮ್ಮನ್ನು, (ನಮಗೆ) ತಸ್ಯ-ಆ ರಸವನ್ನು, ಉಶತೀಃ-ಪ್ರೀತಿಯುಳ್ಳ, ಮಾತರ ಇವ-ತಾಯಿಗಳಂತೆ, ಭಾಜಯತ-ಹೊಂದಿಸಿರಿ; ಯಸ್ಯ-ಯಾವ ರಸದ, ಕ್ಷಯಾಯ (ನಿವಾಸಾಯ)—ಸ್ಥಿತಿಯನ್ನು ಕುರಿತು, ಜಿನ್ವಥ ಪ್ರೀತಿಯನ್ನು ಹೊಂದುವಿರೋ, ತಸ್ಮೈ-ಅದಕ್ಕೋಸ್ಕರ, (ಆ ರಸವನ್ನು ಹೊಂದುವುದಕ್ಕಾಗಿ) ವಃ-ನಿಮ್ಮನ್ನು, ಅರಂ-ಅಧಿಕವಾಗಿ, ಗಮಾಮ-ಹೊಂದುತ್ತೇವೆ ; ಹೇ ಆಪಃ-ಎಲೈ ಜಲಗಳೇ, ನಃ-ನಮ್ಮನ್ನು, ಜನಯಥ-ಹುಟ್ಟಿದವರನ್ನಾಗಿ ಮಾಡಿರಿ ; ಚ-ಅನ್ವಯ.

ಜಲವು ಸುಖಕ್ಕೆ ಕಾರಣವಾಯಿತೆಂಬುವುದನ್ನು ಹೇಳಬೇಕಾದ್ದು ಇಲ್ಲವು. ಇಂದ್ರಿಯಗಳಿಗೆ ರಮಣೀಯತ್ವವೂ ಮಹತ್ವವೂ ಅನ್ನದಿಂದುಂಟಾಗುವುದು ; ಆಹಾರವೂ ಕಾಲದಲ್ಲಿ ಪರಮಾತ್ಮನನ್ನು ಪ್ರತ್ಯಕ್ಷವಾಗಿ ಕಾಣುವುದು ನಿರತಿಶಯವಾದ ಸುಖವನ್ನು ಕೊಡುವುದು. ಅಂತಹ ಸಾಕ್ಷಾತ್ಕಾರವನ್ನು ಕೊಟ್ಟು ತನ್ನನ್ನು ಪ್ರೀತಿಸಬೇಕೆಂದೂ, ಮೋಕ್ಷಸಾಧನವಾದ ಭಕ್ತಿಯನ್ನು ತನ್ನಲ್ಲಿ ಉಂಟುಮಾಡಬೇಕೆಂದೂ ಅಧಿಕಾರಿಯು ಜಲಾಂತರ್ಯಾಮಿಯಾದ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತಾನೆ. ಈ ಮಂತ್ರವನ್ನು ಜಪಿಸುವುದರಿಂದ ಅನ್ನಪುತ್ರಾದಿಗಳಿಂದ ಪರಿಶೋಭಿಸುತ್ತಾ, ಸ್ವರ್ಗಾಪವರ್ಗಮೋಕ್ಷಗಳೆಂಬ ಅನಾದ್ಯಂತ ಸುಖವೂ ತನಗೆ ಲಭಿಸಬೇಕೆಂದು ದೇವರನ್ನು ಪ್ರಾರ್ಥಿಸಿದಂತಾಗುವುದು.

ಮೋಕ್ಷವನ್ನು ಬಯಸುವ ಜಿಜ್ಞಾಸುಗಳಿಗೆ ಆ ಮೋಕ್ಷವನ್ನು ಪಡೆಯುವುದಕ್ಕೋಸುಗವಾಗಿ ಬಾಹ್ಯ ಜಲದೇವತೆ ಉಪಾಸನೆಯು

ಕೊನೆಗಾಣುವವರೆಗೂ ಜ್ಞಾನವಿಕಾಸವು ಉಂಟಾಗಬೇಕು ; ಜ್ಞಾನವಿಕಾಸಕ್ಕೋಸುಗ ದೇಹಸಾಮರ್ಥ್ಯವೂ ಇಂದ್ರಿಯಸಾಮರ್ಥ್ಯವೂ ಅವಶ್ಯವಾಗಿ ಬೇಕು ; ದೇಹಸಾಮರ್ಥ್ಯಕ್ಕಾಗಿ ಅನ್ನವು ಮುಖ್ಯವಾಗಿ ಎಲ್ಲರಿಗೂ ಬೇಕಾದುದು. ಅದುದರಿಂದಲೇ 'ಅನ್ನೋವೈ ಸಃ' ಎಂದು ಉಪನಿಷತ್ತುಗಳು ಆ ಪರಮಾತ್ಮನನ್ನು ಕೊಂಡಾಡುತ್ತಲಿವೆ: ಇದರಿಂದ ಬ್ರಹ್ಮಲೋಕಸುಖವು ಬಹುಕಾಲದವರೆಗೆ ನಿಲ್ಲದು ; ಕೈವಲ್ಯದಿಂದುಂಟಾಗುವ ಆನಂದವು ಅತ್ಯಲ್ಪವಾದುದು : ಆ ಪರಮಾತ್ಮನನ್ನು ಅನುಭವಿಸುವುದೇ ಅಧಿಕಮಂಗಳವಾದುದು ; ಅದೇ ಬಹಳ ಸುಖದಾಯಕವಾದುದು ಎಂದು ಹೇಳಿದಂತಾಯಿತು ; ಬ್ರಹ್ಮವಿದ್ಯೆಯನ್ನು ಸಾಧಿಸಿದ ಜನ್ಮವೇ ಉತ್ತಮವಾದುದು ; ಈ ವಿದ್ಯೆಯನ್ನು ಹೊಂದಿಸುವುದೇ ಹುಟ್ಟಿನಂತೆ ಮಾಡುವುದೆಂಬುದರ ಅಭಿಪ್ರಾಯ ; ಮೊಲೆಹಾಲೇ ಜೀವನವಾಗಿರುವ, ಶಿಶು ಅಂದರೆ, ಹಸುಗೂಸುಗಳಿಗೆ ಹೇಗೆ ತಾಯಿಯಾದವಳು ತನ್ನ ಮೊಲೆಹಾಲನ್ನು ಕೊಟ್ಟು ಪೋಷಿಸುವಳೋ ಹಾಗೆಯೇ ಬ್ರಹ್ಮಜ್ಞಾನವನ್ನರಿಯುವ ಶಿಶುಗೆ ಸ್ವಾಭಾವಿಕತಾಯಿಯಾದ ಪರಮಾತ್ಮನು ಬ್ರಹ್ಮಜ್ಞಾನವನ್ನು ಕೊಟ್ಟು ಕಾಪಾಡಬೇಕೆಂದು ಈ ಮಂತ್ರದಾಯಕನನ್ನು ಅಧಿಕಾರಿಯು ಪ್ರಾರ್ಥಿಸುತ್ತಾನೆಂಬುದೇ ಈ ಮಂತ್ರದ ಮುಖ್ಯತಾತ್ಪರ್ಯವು.

೫. ಆಪೋಶನದ ಇತರ ಮಂತ್ರವು :—

ಸೂರ್ಯಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ ಪಾಪೇಭ್ಯೋ ರಕ್ಷಂತಾಂ ಯದ್ರಾತ್ರ್ಯಾ ಪಾಪಮಕಾರ್ಷಂ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ ರಾತ್ರಿಸ್ತದವಲುಂಪತು ಯತ್ಕಿಂಚ ದುರಿತಂ ಮಯಿ ಇದಮಹಂ ಮಾಮಮೃತಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ.

ಸೂರ್ಯಶ್ಚ-ಸೂರ್ಯಪರಮಾತ್ಮನೂ, ಮನ್ಯುಶ್ಚ-ಕೋಪವೂ, ಮನ್ಯುಪತಯಶ್ಚ-ಕೋಪಕ್ಕೆ ಸ್ವಾಮಿಗಳಾದ ಅಗ್ನ್ಯಾದಿದೇವತೆಗಳೂ, ಮಾಂ-ನನ್ನನ್ನು, ಮನ್ಯುಕೃತೇಭ್ಯಃ-ಕೋಪದಿಂದ ಮಾಡಿದ,

ಪಾಪೇಭ್ಯಃ-ಪಾಪಗಳತ್ತಣಿಂದ, ರಕ್ಷಂತಾಂ-ಕಾಪಿಡಲಿ, ರಾತ್ರ್ಯಾ-ರಾತ್ರಿಯಲ್ಲಿ, ಮನಸಾ-ಚಿತ್ತದಿಂದಲೂ, ವಾಚಾ-ಮಾತಿನಿಂದಲೂ, ಹಸ್ತಾಭ್ಯಾಂ-ಕೈಗಳಿಂದಲೂ, ಪದ್ಭ್ಯಾಂ-ಕಾಲುಗಳಿಂದಲೂ, ಉದರೇಣ-ಹೊಟ್ಟೆಯಿಂದಲೂ, ಶಿಶ್ನಾ-ಪುರುಷರ ಗುಹ್ಯದಿಂದಲೂ, ಯತ್-ಯಾವ ಪಾಪಂ-ಪಾಪವನ್ನು, ಅಕಾರ್ಷಂ-ಮಾಡಿದೆನೋ, ತತ್-ಆ ಪಾಪವನ್ನು, ರಾತ್ರಿಃ-ರಾತ್ರಿಶಬ್ದವಾಚ್ಯನಾದ ಭಗವಂತನು, ಅವಲುಂಪತು-ಇಲ್ಲದಂತೆ ಮಾಡಲಿ, ಹೋಗಲಾಡಿಸಲಿ; ಮಯಿ-ನನ್ನಲ್ಲಿ, ಯತ್ಕಿಂಚ-ಯಾವ ಅಲ್ಪವಾದ, ದುರಿತಂ-ಪಾಪವನ್ನು, (ಅವಲುಂಪತು) ಹೋಗಲಾಡಿಸಲಿ, ಅಹಂ-ನಾನು, ಇದಂ-ಈ, ಮಾಂ-ನಾನೆಂಬ ಆತ್ಮವಸ್ತುವನ್ನು, ಅಮೃತಯೋನೌ-ಮೋಕ್ಷಕ್ಕೆ ಕಾರಣವಾದ, ಸರ್ವಾಧಿಕರಣವಾದ, ಜ್ಯೋತಿಷಿ-ತೇಜೋರೂಪವಾದ, ಸೂರ್ಯೇ-ಸೂರ್ಯನಾಮಕನಾದ ಭಗವಂತನಲ್ಲಿ, ಜುಹೋಮಿ-ಹೋಮಮಾಡುವೆನು. ಸ್ವಾಹಾ-ಇದು ಹೋಮಮಂತ್ರವು, ಸಮರ್ಪಣಮಂತ್ರವು.

ಸೂರ್ಯ ಉದಯತಿ (ಪ್ರೇರಯತಿ) ಇತಿ ಸೂರ್ಯಃ ಎಂದರೆ ಚೇತನರಿಗೆ ಚೆನ್ನಾಗಿ ಪ್ರೇರಣೆಯನ್ನು ಮಾಡುವ ಪರಮಾತ್ಮನೆಂದು ಅರ್ಥ. “ರಾತ್ರೀಯಂತೇ ಯಸ್ಯ ಸನ್ನಿಧೌ ಸತ್ತ್ವಾಂತರಾಣಿ” ಆಶ್ರಯಿಸಿದ ವಸ್ತುಗಳು ಯಾವನಿಂದ ರಕ್ಷಿಸಲ್ಪಡುತ್ತವೋ ಅಂತಹ ಪರಮಾತ್ಮನಿಗೆ ರಾತ್ರಿಯೆಂದು ಹೆಸರು. ತ್ರಿಕರಣಗಳಿಂದ ಮಾಡಿದ ಪಾಪಗಳನ್ನೂ, *ಪೂರ್ವಾಘ ಉತ್ತರಾಘಗಳನ್ನೂ ಸಹ ಹೋಗಲಾಡಿಸಿ ನನ್ನನ್ನು ಪೊರೆಯಬೇಕೆಂದು ಚೇತನನು ಮಾಡುವ ಭಗವತ್ಪ್ರಾರ್ಥನೆಯೇ ಇದು. “ಮನಸಾವಾಚಾಹಸ್ತಾಭ್ಯಾಂ” ಎಂಬುದರಲ್ಲಿರುವ ‘ಮನಸಾ’ ಶಬ್ದಕ್ಕೆ ಇಂದ್ರಿಯಗಳೆಂದು ಅರ್ಥವು.

ಅಧಿಕಾರಿಯು ಶ್ರೀತತ್ತ್ವಜ್ಞಾನರೂಪವೆಂಬ ಯಾಗದಲ್ಲಿ, ಆತ್ಮನೆಂಬ ಹವಿಸ್ಸನ್ನು ಭಗವಂತನೆಂಬ ಅಗ್ನಿಯಲ್ಲಿ ಹೋಮಮಾಡುವನು.

---

* ಗುರುವಿನ ಉಪದೇಶದಿಂದ ಜ್ಞಾನವನ್ನು ಪಡೆದನಂತರ ಮಾಡಿದ ಪಾಪವು ಉತ್ತರಾಘವೆನಿಸುವುದು; ಇದಕ್ಕೆ ಹಿಂದೆಯೇ ಮಾಡಿದ ಪಾತಕವು ಪೂರ್ವಾಘವೆನಿಸುವುದು.

ಎಂದರೆ ಆತ್ಮನನ್ನು ಭಗವಂತನ ಪಾದಾರವಿಂದಗಳಲ್ಲಿ ಸಮರ್ಪಣೆ ಮಾಡುವನೆಂದು ಭಾವವು. ಜೀವನನು ಪ್ರಪತ್ತಿಮಾರ್ಗವನ್ನು ಅವಲಂಬಿಸಿದರೆ ವಾತ್ಸಲ್ಯಜಲಧಿಯಾಗಿಯೂ ಆಪತ್ಪ್ರತೀಕ್ಷನಾಗಿಯೂ ಇರುವ ಪರಮಾತ್ಮನು ಜೀವನಸುಗೊಂಡಿರುವ ತಡೆಗಳೆಲ್ಲವನ್ನೂ ಪರಿಹರಿಸಿ ಸ್ವಾನುಭವವನ್ನು ಕರುಣಿಸುವನು. ಯಾಗವೆಂದರೆ ಒಂದು ದೇವತೆಯನ್ನು ಕುರಿತು ಮಾಡುವ ದ್ರವ್ಯತ್ಯಾಗವು. ಇಲ್ಲಿ ಸರ್ವಶೇಷಿಯಾದ ಪರಮಾತ್ಮನೇ ನಿರುಪಾಧಿಕನಾದ ದೇವತೆಯು; ಶೇಷನಾದ ಆತ್ಮನೇ ನಿರುಪಾಧಿಕವಾದ ಹವಿಸ್ಸೆಂಬ ದ್ರವ್ಯವು; ಆತ್ಮಸಮರ್ಪಣೆಯೇ ನಿರುಪಾಧಿಕವಾದ ತ್ಯಾಗವು; ಮೋಕ್ಷವೇ ನಿರುಪಾಧಿಕವಾದ ಫಲವು. ಅಕಿಂಚನನಾಗಿ ಅನನ್ಯಗತಿಕನಾಗಿ ನಿನ್ನನ್ನು ಹೊಂದಲು ನೀನೇ ಮಾರ್ಗತೋರಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುವುದಕ್ಕೆ ಪ್ರಪತ್ತಿಮಾರ್ಗವೆಂದು ಹೆಸರು; ಇದನ್ನೇ ಶರಣಾಗತಿಯೆಂದೂ ಹೇಳುವರು. ಈ ಮಾರ್ಗದಲ್ಲಿ ನಡೆಯುವವನೇ ಪ್ರಪನ್ನನು. ಶೇಷಿಯೆಂದರೆ ಪರಮಾತ್ಮನು, ಆವನಿಗೆ ಮುಖವಿಕಾಸವನ್ನುಂಟುಮಾಡುವುದು ತನಗೆ ಸ್ವರೂಪವೆಂದು ತಿಳಿದಿರುವ ಜೀವನನಿಗೆ ಶೇಷನೆಂದು ಹೆಸರು. ಈ ಜ್ಞಾನವೇ ಶೇಷತ್ವಜ್ಞಾನವೆನಿಸುವುದು.

೪. ಎರಡನೆಯ ಶ್ಲೋಕವು, ಇದರ ಮಂತ್ರ:—

ದಧಿಕ್ರಾವ್ಣೋ ಅಕಾರಿಷಂ, ಜಿಷ್ಣೋರಶ್ವಸ್ಯ ವಾಜಿನಃ
ಸುರಭಿನೋ ಮುಖಾಕರತ್ ಪ್ರಣ ಆಯೂಗ್ಂಷಿತಾರಿಷತ್
ಆಪೋಹಿಷ್ಠಾಮಯೋಭುವಃ............ಜನಯಥಾಚನಃ.

ಜಿಷ್ಣೋಃ—ಜಯಶೀಲನಾಗಿಯೂ, ಅಶ್ವಸ್ಯ-ಸರ್ವಲೋಕವ್ಯಾಪಿಯಾಗಿಯೂ, ವಾಜಿನಃ-ವೇಗವುಳ್ಳವನಾಗಿಯೂ ಇರುವ, ದಧಿಕ್ರಾವ್ಣಃ-ದಧಿಕ್ರಾವಾ ಎಂಬ ದೇವತೆಯನ್ನು, ಅಕಾರಿಷಂ-(ಸ್ತೋತ್ರ) ಮಾಡುವೆನು. (ಸಃ-ಆ ದಧಿಕ್ರಾವನು) ನಃ-ನಮ್ಮ, ಮುಖಾ-ಮೋರೆಗಳನ್ನು, ಸುರಭಿ-ವಾಸನೆಯುಳ್ಳದನ್ನಾಗಿ, ಶುದ್ಧವಾದುದನ್ನಾಗಿ ಕರತ್-ಮಾಡಲಿ; (ಪ್ರಣಆಯೂಂಷಿ, ಪ್ರ+ನಃ+ಆಯೂಗ್ಂಷಿ) ನಃ-ನಮ್ಮ, ಆಯೂಂಷಿ-ಆಯುಸ್ಸುಗಳನ್ನು, ಪ್ರತಾರಿಷತ್-ಬೆಳೆಸಲಿ,

ಹಿಳ್ಳದಂತೆ ಮಾಡಲಿ; [ಆಪೋಹಿಷ್ಠಾ...ಜನಯಥಾಚನಃ ಎಂಬ ಮಂತ್ರದ ಅರ್ಥವನ್ನೂ ವಿವರಣವನ್ನೂ ಹಿಂದೆಯೇ ವಿಚಾರಮಾಡಿರುವೆವು.]

ಜಗಂತಿ ದಧಿಕ್ರಾವ್ಣಃ ದಧಿಕ್ರಾವಾ—ಎಂದರೆ ಸಕಲಭೋಗ ಗಳನ್ನೂ ಧರಿಸುವವನಾಗಿ, ಎಲ್ಲ ಜಗತ್ತುಗಳನ್ನೂ ಧರಿಸುವವನಾಗಿ ನಿಖಿಲಲೋಕಗಳನ್ನೂ ಆಳುವ ತ್ರಿವಿಕ್ರಮನಾರಾಯಣನೆಂದು ಅರ್ಥ ವಾಗುವುದು. ದೈತ್ಯಗಳನ್ನು ಸಂಹರಿಸುವುದರಿಂದ ಜಯಶೀಲನು; ಭಕ್ತರು ತಮ್ಮ ಹೃದಯದಲ್ಲಿ ನೆನೆದ ಮಾತ್ರದಲ್ಲಿಯೇ ಸ್ವಲ್ಪವೂ ವಿಳಂಬ ಮಾಡದೆ ಅವರೆಡೆಗೆ ಬರುವುದರಿಂದ ವೇಗವುಳ್ಳವನು. ಇಲ್ಲಿ 'ಮುಖ' ಶಬ್ದವು ಮನಸ್ಸಿಗೆ ಉಪಲಕ್ಷಣವು.

ಭಗವಂತನನ್ನು ಹೊಗಳಿ ಪ್ರಯೋಜನವನ್ನು ಪಡೆಯಬೇಕಾದರೆ ಆ ಕಾರ್ಯವನ್ನು ಮಾಡುವವನ ಮನಸ್ಸು ಏಕಾಗ್ರವಾಗಿ ಬಹಳ ಶುದ್ಧ ವಾಗಿರಬೇಕು. ಸ್ತುವನ್ನನಿಗೆ ಭಗವಂತನ ಗುಣಗಳೇ ಮುಖ್ಯವಾದುದ ರಿಂದ ಆ ಗುಣಗಳನ್ನೆಣಿಸುವುದಕ್ಕೆ ಆಯುಸ್ಸನ್ನೂ, ಶ್ರೋತ್ರಾದ್ಯಾದಿ ಗಳನ್ನಾಳಿಸಲ್ಲದಂತೆ, ಒದಗುವ ವಿಘ್ನಗಳ ಪರಿಹಾರವನ್ನು ಹೀಗೆ ಪಡೆ ಯಬೇಕೆಂದು ಹೇಳುವುದರಿಂದ ಅವನ ಪ್ರಾರ್ಥನೆಗೆ ಮಾನ ವಾಗಿದ್ದುದೆಲ್ಲ ಕೋರಿರುವನು.

೬. ಮೂರು ಅರ್ಘ್ಯಗಳನ್ನು ಕೊಡುವುದು.

ಓಂಕಾರಸಹಿತವಾದ ಮೊದಲನೆಯ ಮೂರು ವ್ಯಾಹೃತಿ ಗಳೊಡನೆ ಗಾಯತ್ರೀಮಂತ್ರವನ್ನು ಜಪಿಸುತ್ತ ಸೂರ್ಯಾಭಿಮುಖನಾಗಿ ನಿಂತು ಆ ಮಂಡಲದೊಳಗಿರುವ ಪರಮಾತ್ಮನನ್ನು ನೆನೆಯುತ್ತ ಅರ್ಘ್ಯವನ್ನು ಕೊಡುವುದು.

೭. ಒಂದು ಪ್ರಾಣಾಯಾಮವು.

೮. ಒಂದು ಅರ್ಘ್ಯವನ್ನು ಕೊಡುವುದು.

ಕಾಲವು ಮೀರಿಹೋಗಿದ್ದರೆ ಆ ಕಾಲಮೀರಿದುದರ ದೋಷವನ್ನು ಹೋಗಲಾಡಿಸುವುದಕ್ಕಾಗಿ ಮತ್ತೊಂದು ಅರ್ಘ್ಯವನ್ನು ಕೊಡುವುದು.

೧೦. **ಅಸಾವಾದಿತ್ಯೋ ಬ್ರಹ್ಮ** ಎಂದರೆ ಈ ಆದಿತ್ಯನು ಪರಬ್ರಹ್ಮನು, ಎಂಬ ಈ ಮಂತ್ರವನ್ನು ಪಠಿಸುತ್ತ, ತನ್ಮಂತ್ರವಾಚ್ಯನಾದ ಭಗವಂತನನ್ನು ನೆನೆಯುತ್ತ ಒಂದಾವೃತ್ತಿ ತನ್ನನ್ನು ತಾನೇ ಪ್ರದಕ್ಷಿಣೆ ಮಾಡುವುದು. ಸೂರ್ಯಮಂಡಲದೊಳಗಿರುವ ಶ್ರೀಮನ್ನಾರಾಯಣನಿಗೆ ಆದಿತ್ಯನೆಂದು ಹೆಸರು.

೧೧. ಒಂದು ಆಚಮನವು.

೧೨. ಕೇಶವಾದಿದ್ವಾದಶತರ್ಪಣಂ.

ಕೇಶವಂ ತರ್ಪಯಾಮಿ, ನಾರಾಯಣಂ ತರ್ಪಯಾಮಿ, ಮಾಧವಂ ತರ್ಪಯಾಮಿ, ಗೋವಿಂದಂ ತರ್ಪಯಾಮಿ. ವಿಷ್ಣುಂ ತರ್ಪಯಾಮಿ, ಮಧುಸೂದನಂ ತರ್ಪಯಾಮಿ, ತ್ರಿವಿಕ್ರಮಂ ತರ್ಪಯಾಮಿ, ವಾಮನಂ ತರ್ಪಯಾಮಿ, ಶ್ರೀಧರಂ ತರ್ಪಯಾಮಿ, ಹೃಷೀಕೇಶಂ ತರ್ಪಯಾಮಿ. ಪದ್ಮನಾಭಂ ತರ್ಪಯಾಮಿ. ದಾಮೋದರಂ ತರ್ಪಯಾಮಿ, ದಾಮೋದರಃ ಪ್ರೀಯತಾಂ.

ಕೇಶವಂ ತರ್ಪಯಾಮಿ-ಕೇಶವನನ್ನು ತೃಪ್ತಿಗೊಳಿಸುವೆನು ಇತ್ಯಾದಿ. ದಾಮೋದರಃ ಪ್ರೀಯತಾಂ-ದಾಮೋದರನು ಪ್ರೀತಿಯುಳ್ಳವನಾಗಲಿ.

ಧನುರ್ಮಾಸವೇ ಮೊದಲಾದ ಹನ್ನೆರಡು ಮಾಸಗಳಿಗೆ ಕೇಶವಾದಿಮೂರ್ತಿಗಳು ಅಧಿಕಾರಿಗಳಾದುದರಿಂದ ಅವರಿಗೆ ತೃಪ್ತಿಯಾಗುವ ಸಲುವಾಗಿ ಈ ಹನ್ನೆರಡು ತರ್ಪಣಗಳನ್ನು ಮಾಡುವುದು.

೧೩. ಬಳಿಕ ಎರಡು ಆಚಮನಗಳನ್ನು ಮಾಡುವುದು.

೧೪. **ಶ್ರೀಭಗವತ್ಸಮಾರಾಧನಂ ಕರಿಷ್ಯೇ.** ಇದನ್ನು ಭಗವಂತನ ಆರಾಧನರೂಪವಾಗಿ ಮಾಡುವೆನು ಎಂದು ಒಂದಾವೃತ್ತಿ, ತರ್ಪಣಕ್ಕೆ ಬಿಡುವಂತೆಯೇ ನೀರನ್ನು ಬಿಟ್ಟು ಅನಂತರದಲ್ಲಿ,

೧೫. **ಓಂ ಭೂರ್ಭುವಸ್ಸುವಃ**

ಎಂದು ಹೇಳಿಕೊಂಡು ಜಪಮಾಡುವೆಡೆಯನ್ನು ಪ್ರೋಕ್ಷಿಸಿ ಮೂರು ಪ್ರಾಣಾಯಾಮಗಳನ್ನು ಮಾಡಿ.

೧೬. ಕರನ್ಯಾಸ. ಇದರ ಮಂತ್ರವು:—

ಪ್ರಣವಸ್ಯ ಋಷಿರ್ಬ್ರಹ್ಮಾ ದೇವೀಗಾಯತ್ರೀಚ್ಛಂದಃ, ಪರಮಾತ್ಮಾ ಶ್ರೀಮನ್ನಾರಾಯಣೋದೇವತಾ.

ಪ್ರಣವಸ್ಯ-ಓಂಕಾರಕ್ಕೆ, ಬ್ರಹ್ಮಾ-ಬ್ರಹ್ಮದೇವರು, ಋಷಿಃ-ಋಷಿಯು; ದೇವೀ-ದೇವತೆಯಾದ, ಗಾಯತ್ರೀ-ಗಾಯತ್ರಿಯು, ಛಂದಃ-ಛಂದಸ್ಸು; ಪರಮಾತ್ಮಾ ಶ್ರೀಮನ್ನಾರಾಯಣಃ-ಪರಮಾತ್ಮನಾದ ಶ್ರೀಮನ್ನಾರಾಯಣನೇ, ದೇವತಾ ದೇವತೆಯು.

ನ್ಯಾಸನೆಂದರೆ ಇಡುವುದು. ಕಳ್ಳ ಕೈಯನ್ನು ತಲೆ, ತುಟಿ, ಎದೆ ಇವುಗಳ ಮೇಲೆ ಇಡುವುದು. ಋಷಿಯ ಹೆಸರನ್ನು ಹೇಳುವಾಗ ತಲೆಯನ್ನೂ, ಛಂದಸ್ಸಿನ ಹೆಸರನ್ನು ಉಚ್ಚರಿಸುವಾಗ ಬಾಯನ್ನೂ, ದೇವತೆಯ ಹೆಸರನ್ನು ಹೇಳುವಾಗ ಎದೆಯನ್ನೂ ಕೈಯಿಂದ ಮುಟ್ಟಿ ಕರತಾಳವನ್ನು ಮಾಡುವುದು.

ಲೋಕೋಪಕಾರಕ್ಕೋಸ್ಕರ ಈ ಮಂತ್ರವನ್ನು ಹೇಳಿದ ಋಷಿಯನ್ನು ತಾನು ಕೃತಜ್ಞತೆಯಿಂದ ವಂದಿಸುತ್ತಾನೆಂಬುದನ್ನು ತೋರಿಸಲು, ಆ ಋಷಿಯ ಹೆಸರು ಬಂದಾಗ ಕೈಯಿಂದ ತಲೆಯನ್ನು ಮುಟ್ಟಿಕೊಳ್ಳುವುದರ ಅಭಿಪ್ರಾಯ; ಆ ಋಷಿಯ ಬಾಯಿಂದ ಹೊರಟಂತೆಯೇ ತನ್ನ ಬಾಯಿಂದಲೂ ಆ ಮಂತ್ರವು ಉಚ್ಚರಿಸಲ್ಪಡಲು ಸೌಕರ್ಯವುಂಟಾಗಬೇಕೆಂಬ ಆಸೆಯಿಂದ ಬಾಯನ್ನು ಮುಟ್ಟಿಕೊಳ್ಳುವುದು. ತನ್ನ ಪ್ರಾರ್ಥನೆಯನ್ನು ಲಾಲಿಸಿ ಈ ಮಂತ್ರಕ್ಕೆ ಅಧಿಪತಿಯಾದ ದೇವತೆಯು ತನ್ನ ಹೃದಯದಲ್ಲಿ ನಿಲ್ಲಬೇಕೆಂಬ ಆಶಯವನ್ನು ಸೂಚಿಸುವುದಕ್ಕಾಗಿ ಎದೆಯನ್ನು ಮುಟ್ಟಿಕೊಳ್ಳುವುದು.

೧೭. ಹತ್ತು ಪ್ರಾಣಾಯಾಮಗಳು. (ಮೌನದಿಂದ ಜಪಮಾಡುವುದು.)

೧೮. ಒಂದು ಪ್ರಾಣಾಯಾಮವು.

೧೯. ಗಾಯತ್ರೀ ಆಹ್ವಾನವು. ಇದರ ಮಂತ್ರ:—

ಆಯಾತು ವರದಾದೇವೀ ಅಕ್ಷರಂ ಬ್ರಹ್ಮಸಮ್ಮಿತಂ; ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮಜುಷಸ್ವನಃ;

ಓಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮನಾಮಾಸಿ ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುಃ ಅಭಿಭೂರೋಂ ಗಾಯತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ.

ವರದಾ-ತನ್ನನ್ನು ಹೊಂದುವವರಿಗೆ ಇಷ್ಟಗಳೆಲ್ಲವನ್ನು ಕೊಡುವವಳಾದ, ಅಕ್ಷರಂ-ನಿತ್ಯಳಾದ, ಬ್ರಹ್ಮಸಮ್ಮಿತಂ-ವೇದ ಸ್ವರೂಪ ಅಥವ ಪರಬ್ರಹ್ಮಕ್ಕೆ ಸಮಾನೆಯಾದ, ಛಂದಸಾಂ ಮಾತಾ-ಎಲ್ಲ ಛಂದಸ್ಸುಗಳಿಗೂ ಮುಖ್ಯಳಾದ, ಗಾಯತ್ರೀ-ಗಾಯತ್ರೀ ಎಂಬ, ದೇವೀ-ದೇವತೆಯು, ಆಯಾತು-(ಇಲ್ಲಿಗೆ) ಬರಲಿ; ನಃ-ನಮ್ಮ, ಇದಂ ಬ್ರಹ್ಮ ಈ ಸ್ತೋತ್ರರೂಪವಾದ ವೇದವಾಕ್ಯವನ್ನು, ಜುಷಸ್ವ-ಅಂಗೀಕರಿಸು; ಓಜೋಽಸಿ-ನೀನು ಇಂದ್ರಿಯಗಳಿಗೆ ಶಕ್ತಿಯಾಗಿದ್ದೀಯೆ, ಸಹೋಽಸಿ ವೇಗವಾದವಳಾಗಿದ್ದೀಯೆ, ಬಲಮಸಿ-ಶಕ್ತಿಯಾಗಿದ್ದೀಯೆ, ಭ್ರಾಜೋಽಸಿ-ಪ್ರಕಾಶವಾಗಿದ್ದೀಯೆ; ದೇವಾನಾಂ-ದೇವತೆಗಳ, ನಾಮ-ಹೆಸರುಗೊಂಡ, ಧಾಮಾಸಿ-ತೇಜಸ್ಸಾಗಿದ್ದೀಯೆ; ವಿಶ್ವಮಸಿ-ವಿಷ್ಣುವಿನಂತೆ ಎಲ್ಲವನ್ನೂ ಆಕ್ರಮಿಸಿದವಳಾಗಿರುವೆ; ವಿಶ್ವಾಯುಃ-ನಾಲ್ಕುವಿಧವಾದ ಭೂತಗಳ ಆಯುಸ್ಸನ್ನು ಹೆಚ್ಚಿಸುವವಳಾಗಿದ್ದೀಯೆ; ಸರ್ವಮಸಿ-ನಿನ್ನನ್ನು ಸ್ತುತಿಗೆಯ್ವ ವಸ್ತುಗಳನ್ನು ನಿರ್ವಹಿಸುವವಳಾಗಿರುವೆ. ಸರ್ವಾಯುಃ-ಕಾಲವನ್ನು ಸ್ವವಶಕ್ಕೆ ಗೆಯ್ಯುವವಳಾಗಿರುವೆ, ಅಭಿಭೂಃ-ಸಕಲಪಾಪಗಳನ್ನು ಪರಿಹಾರಮಾಡುವವಳೂ ನೀನೇ, (ಇಂತಹ) ಗಾಯತ್ರೀಂ-ಗಾಯತ್ರಿಯನ್ನು, ಆವಾಹಯಾಮಿ-ಆವಾಹನೆಗೆಯ್ಯುವೆನು. ಸಾವಿತ್ರೀಮಾವಾಹಯಾಮಿ-ಸಾವಿತ್ರಿಯನ್ನು ಆವಾಹನೆ ಮಾಡುವೆನು. ಸರಸ್ವತೀಮಾವಾಹಯಾಮಿ-ಸರಸ್ವತಿಯನ್ನು ಆವಾಹನೆ ಮಾಡುವೆನು.

ಗಾಯತ್ರಿಯನ್ನು ಜಪಿಸುವುದಕ್ಕೆ ಮೊದಲೇ, ಜಪಮಾಡಬೇಕೆಂದಿರುವವನು ತನ್ನಂತ್ರಾಭಿಮಾನದೇವತೆಯನ್ನು "ನನ್ನ ಹೃದಯದೊಳಿದ್ದುಕೊಂಡು ನಾನು ಮಾಡುವ ಪ್ರಾರ್ಥನೆಯನ್ನು ನೀನು ಅಂಗೀಕರಿಸಬೇಕು" ಎಂದು ಬೇಡುತ್ತಾನೆ. ಗಾಯತ್ರಿಯಿಂದ ಪ್ರತಿಪಾದ್ಯನಾದವನು ಪರಮಾತ್ಮನು. ಚೇತನನು ಈ ಮಂತ್ರದ ಮೂಲಕವಾಗಿ

ಆ ಪರಮಾತ್ಮನ ಕಲ್ಯಾಣಗುಣಗಣವನ್ನು ಕೀರ್ತಿಸುತ್ತ, ತನ್ನ ಅನಿಷ್ಟವನ್ನು ಹೋಗಿಸಿ ಇಷ್ಟವನ್ನು ಕೊಟ್ಟು ಸಲಹಬೇಕೆಂದು ಬೇಡಿಕೊಳ್ಳುವನು. ಸಿದ್ಧವಾಗಿರುವ ತನ್ನ ಅಂತರಂಗದಲ್ಲಿ ಬಂದು ವಾಸಮಾಡುತ್ತಿರೆಂದು ಪರಮಾತ್ಮನನ್ನು ಕರೆಯುವುದಕ್ಕೆ ಆವಾಹನೆಯೆಂದು ಹೆಸರು.

ಗಾಯತ್ರಿಯು ಬ್ರಹ್ಮಸಮಾನವೆಂದು ಹೇಳಲ್ಪಟ್ಟಿದೆ. ಬ್ರಹ್ಮವೆಂದರೆ ವೇದವು, ಪ್ರಣವವು, ಮತ್ತು ಪರಬ್ರಹ್ಮವು. "ಎಲೈ ಗಾಯತ್ರಿಯೇ, ನೀನು ಎಲ್ಲರ ಇಷ್ಟವನ್ನು ಕೊಡುವಳಾಗಿ ವೇದಕ್ಕೆ ಸಮನಾಗಿ ಇರುವೆ; ಓಂಕಾರದಂತೆ ಎಲ್ಲ ಹುರುಳನ್ನು ಸಂಗ್ರಹಿಸಿಕೊಂಡಿರುವೆ; ಎಲ್ಲ ಲೋಕಗಳಿಗೂ ಕಾರಣನಾದ ಭಗವಂತನೋಪಾದಿಯಲ್ಲಿ ಸಕಲವಾಕ್ಯಗಳಿಗೂ ಮೂಲವಾದ ವೇದಕ್ಕೆ ತಾಯಿಯಂತೆ ಇದ್ದೀಯೆ; ಇಂದ್ರಿಯವುಳ್ಳವರಲ್ಲಿ ಇರುವ ಶಕ್ತಿಯೂ ನೀನೇ; ವೇಗವುಳ್ಳವರಲ್ಲಿ ಇರುವ ವೇಗವೂ ನೀನೇ; ಬಲವುಳ್ಳವರ ಬಲವೂ ನೀನೇ; (ಬಲವೆಂದರೆ ಸಹಿಸುವ ಸಾಮರ್ಥ್ಯವು) ಪ್ರಕಾಶವುಳ್ಳವರ ಪ್ರಕಾಶವೂ ನೀನೇ; ಸಮಸ್ತದೇವತೆಗಳಿಗೂ ಮುಖ್ಯತೇಜಸ್ಸಾಗಿರುವಳೂ ನೀನೇ; ವಿಷ್ಣುವಿನಂತೆ ಸರ್ವವನ್ನು ಆಕ್ರಮಿಸಿರುವಳೂ ನೀನೇ; ನಾಲ್ಕು ಬಗೆಯ ಭೂತಗಳ ಆಯುಸ್ಸನ್ನು ಹೆಚ್ಚುಗೊಳಿಸುವಳಾಗಿ, ಎಲ್ಲವನ್ನೂ ನಿರ್ವಹಿಸುವಳಾಗಿ, ಕಾಲವಿಶೇಷಗಳನ್ನು ವ್ಯವಸ್ಥೆಗೊಳಿಸುವಳಾಗಿ ಇರುವಳೂ ನೀನೇ" ಎಂಬುದು ಗಾಯತ್ರೀಮಂತ್ರದ ಸಾರಾಂಶವು. ಇಂತಹ ಗುಣವಿಶಿಷ್ಟನಾದ ಪರಮಾತ್ಮನು ತನ್ನ ಸಮೀಪದಲ್ಲಿರುವಂತೆ ಭಾವಿಸಿಕೊಂಡು ಜಪವನ್ನು ಮಾಡಬೇಕು.

೨೦. ನ್ಯಾಸವು—ಜಪದಮಂತ್ರ.

ಸಾವಿತ್ರ್ಯಾ ಋಷಿರ್ವಿಶ್ವಾಮಿತ್ರಃ ದೇವೀಗಾಯತ್ರೀ ಛಂದಃ ಪರಮಾತ್ಮಾ ಸವಿತಾ ದೇವತಾ.

ಸಾವಿತ್ರಿಗೆ ವಿಶ್ವಾಮಿತ್ರನು ಋಷಿಯು, ಗಾಯತ್ರೀದೇವಿಯೇ ಛಂದಸ್ಸು, ಸವಿತೃಪರಮಾತ್ಮನೇ ದೇವತೆಯು.

ಸವಿತೃ ಶಬ್ದವು "ಷೂಙ್ ಪ್ರಾಣಿಗರ್ಭವಿಮೋಚನೇ" ಎಂಬ ಧಾತುವಿನಿಂದ ಹುಟ್ಟಿ ಸಮಸ್ತ ಪ್ರಾಣಿಗಳನ್ನು ಹುಟ್ಟಿಸುವ ಪರಮಾತ್ಮ

ನನ್ನು ಹೇಳುವುದು. ಈ ಮಂತ್ರೋಚ್ಚಾರಣೆಯ ಕಾಲದಲ್ಲಿಯೂ ಪ್ರಣವದ ಮಂತ್ರವನ್ನು ಹೇಳುವಾಗ ನಾಭಿ ದಂತೆಯೇ ತಲೆಯನ್ನೂ ಬಾಯನ್ನೂ ಎದೆಯನ್ನೂ ಕೈಯಿಂದ ಮುಟ್ಟಿ ಕರತಾಳವನ್ನು ಮಾಡಬೇಕು.

೨೧. ಶಕ್ತ್ಯಾನುಸಾರ ೧೦೮ ಆವೃತ್ತಿಯಾಗಲಿ, ೨೮ ಆವೃತ್ತಿಯಾಗಲಿ ಗಾಯತ್ರಿಯನ್ನು ಮೌನದಿಂದ ಜಪಿಸಬೇಕು. (ಓಂಕಾರ ಸಮೇತ ವಾಗಿ ಮೊದಲು ಮೂರು ವ್ಯಾಹೃತಿಗಳೊಡನೆ ಗಾಯತ್ರಿಯನ್ನು ಜಪಮಾಡಬೇಕು.)

೨೨. ಜಪವಾದಮೇಲೆ ಮೂರು ಪ್ರಾಣಾಯಾಮಗಳನ್ನು ಮಾಡು ವುದು.

೨೩. ಉಪಸ್ಥಾನವು.

ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ ಪ್ರಾತ ಸ್ಸಂಧ್ಯೋಪಸ್ಥಾನಂ ಕರಿಷ್ಯೇ.

ಶ್ರೀಮಂತನಾದ ಭಗವಂತನ ಅಪ್ಪಣೆಯ ಮೇರೆಗೆ ಬೆಳಿಗ್ಗೆ ಮಾಡುವ ಸಂಧ್ಯಾವಂದನೆಯ ಉಪಸ್ಥಾನವನ್ನು ಮಾಡುವೆನು.

ಜಪವನ್ನು ಮಾಡುವವನು ತನ್ನ ಸಮೀಪದಲ್ಲಿ ಉಪಾಸ್ಯ ದೇವತೆಯು ಇರುವಂತೆ ನೆನೆದುಕೊಂಡು ಆ ದೇವತೆಯ ಗುಣ ಕಥನವನ್ನು ಮಾಡುವುದಕ್ಕೆ ಉಪಸ್ಥಾನವೆಂದು ಹೆಸರು.

**ಉತ್ತಮೇ ಶಿಖರೇ ದೇವಿ ಭೂಮ್ಯಾಂ ಪರ್ವತಮೂರ್ಧನಿ।
ಬ್ರಾಹ್ಮಣೇಭ್ಯೋಽಭ್ಯನುಜ್ಞಾನಂ ಗಚ್ಛ ದೇವಿ ಯಥಾ ಸುಖಂ ॥
ಮಿತ್ರಸ್ಯ ಚರ್ಷಣೀ ಧೃತಃ ಶ್ರವೋದೇವಸ್ಯ ಸಾನಸಿಂ, ಸತ್ಯಂ ಚಿತ್ರಶ್ರವಸ್ತಮಂ, ಮಿತ್ರೋಜನಾನ್ ಯಾತಯತಿ ಪ್ರಜಾನನ್ ಮಿತ್ರೋದಾಧಾರ ಪೃಥಿವೀಮುತ ದ್ಯಾಂ, ಮಿತ್ರಃ ಕೃಷ್ಟೀಃ ಅನಿ ಮಿಷಾಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ, ಪ್ರಸ ಮಿತ್ರ ಮರ್ತೋ ಅಸ್ತು ಪ್ರಯಸ್ವಾನ್ ಯಸ್ತ ಆದಿತ್ಯ ಶಿಕ್ಷತಿ ವ್ರತೇನ, ನಹನ್ಯತೇ ನಜೀಯತೇ ತ್ವೋತೋ ನೈನಂ ಅಗ್ಂಹೋ ಅಶ್ನೋತ್ಯಂತಿತೋ ನದೂರಾತ್.**

ದೇವೇಷು-ಎಲ್ಲಾ ದೇವತೆಯೊ, ಬಾಹ್ಯ ಸೌಖ್ಯ-ಬ್ರಾಹ್ಮಣರುಗಳಿ ಗೋಸುಗ, ಅನುಷ್ಠಾನಂ-ಅನುಗ್ರಹವನ್ನು ಮಾಡಿ, ಭೂಮ್ಯಾಂ-ಭೂಮಿಯಲ್ಲಿ, ಪರ್ವತಮೂರ್ಧನಿ ಪರ್ವತದ ತಿರದಲ್ಲಿ, ಉತ್ತಮೇ ಶಿಖರೇ-ಶ್ರೇಷ್ಠವಾದ ಶಿಖರದಲ್ಲಿ, ಯಥಾಸುಖಂ-ಹೇಗೆ ಸುಖವಾಗಿರುವುದೋ ಹಾಗೆ, ಗಚ್ಛ-ಹೋಗು, ಹಿ-ಅಲ್ಲವೆ ; ಚರ್ಷಣೀಧೃತಃ-ಪ್ರಜೆಗಳನ್ನು ಕಾಪಿಡುವ, ದೇವಸ್ಯ-ದೇವತೆಯಾದ, ಮಿತ್ರಸ್ಯ-ಎಲ್ಲರನ್ನೂ ಪಾಲಿಸುವ ಭಗವಂತನ, ಸತ್ಯಂ-ಯಾವಾಗಲೂ ಅಳಿಯದ. ಸಾನಸಿಂ-ಚೆನ್ನಾಗಿ ಸೇವಿಸಲು ತಕ್ಕದಾದ, ಚಿತ್ರಶ್ರವಸ್ತಮಂ-ಬಹು ಆಶ್ಚರ್ಯಕರವಾದುದರಿಂದ ಕೇಳತಕ್ಕದಾದ, ದ್ಯುಮ್ನಂ-ಯಶಸ್ಸನ್ನು, (ಸ್ತೌಮಿ-ಹೊಗಳುವೆನು) ಮಿತ್ರಃ-ಈ ಮಿತ್ರನು, ಬ್ರುವಾಣಃ-ಅವರವರ ಕರ್ತವ್ಯಗಳನ್ನು ತಿಳಿಸುವನಾಗಿ, ಜನಾನ್-ಜನರನ್ನು, ಯಾತಯತಿ-ಆಯಾ ಕರ್ಮಕ್ಕೆ ತಕ್ಕಂತೆ ನಡೆಯಿಸುವನು, ಮಿತ್ರಃ-ಮಿತ್ರನು, ಪೃಥಿವೀಂ-ಭೂಮಿಯನ್ನೂ ಉತ-ಮತ್ತು, ದ್ಯಾಂ-ಸ್ವರ್ಗವನ್ನೂ, ದಾಧಾರ ಧರಿಸಿದನು, ಪಾಲಿಸಿದನು, ಮಿತ್ರಃ-ಮಿತ್ರನು, ಕೃಷ್ಟೀಃ-ಜನರನ್ನು, ಅನಿಮಿಷಾ-ಎವೆಯಿಕ್ಕದವನಾಗಿ, ಅಭಿಚಷ್ಟೇ-ನೋಡುತ್ತಾನೆ, ಪ್ರಕಾಶಿಸುವಂತೆ ಮಾಡುತ್ತಾನೆ. ಘೃತವತ್-ತುಪ್ಪದಿಂದ ಕೂಡಿದ, ಹವ್ಯಂ-ಅನ್ನವನ್ನು, ಸತ್ಯಾಯ-ಅವಿಕಾರನಾದ ಭಗವಂತನಿಗಾಗಿ. ವಿಧೇಮ-ನೀಡುವೆವು ; ಮಿತ್ರ ಆದಿತ್ಯ-ಎಲ್ಲಕ್ಕೆ ಕಾರಣವಸ್ತುವಾದ ಮಿತ್ರನೇ, ಯಃ-ಯಾವನೊಬ್ಬನು, ವ್ರತೇನ-ನಿಯಮದೊಡನೆ, ತೆ (ತೇ)-ನಿನಗೆ, ಶಿಕ್ಷತಿ-(ಅನ್ನಾದಿಗಳಿಂದ) ಉಪಚರಿಸುವನೋ, ಮರ್ತಃ-(ಮರ್ತ್ಯಃ)-ಮನುಷ್ಯನಾದ, ಸಃ-ಆತನು, ಪ್ರ-ಹೆಚ್ಚಾದ, ಪ್ರಯಸ್ವಾನ್-ಅನ್ನಾದಿ ಸಂಪದದಿಂದ ಕೂಡಿದವನಾಗಿ, ಅಸ್ತು-ಆಗಲಿ ; ತ್ವೋತಃ (ತ್ವಾ-ಊತಃ)-ನಿನ್ನಿಂದ ಪಾಲಿಸಲ್ಪಟ್ಟ ಆತನು, ನಹನ್ಯತೇ-ರೋಗಾದಿಗಳಿಂದ ಕೊಲೆಗೊಳಿಸಲ್ಪಡುವನಲ್ಲನು ; ನಜೀಯತೇ-ಹಗೆಗಳಿಂದ ಗೆಲ್ಲಲ್ಪಡನು ; ಏನಂ-ನಿನ್ನಿಂದ ಕಾಪಿಡಲ್ಪಟ್ಟ ಇವನನ್ನು. ಅಂಹಃ-(ಅಂಹಃ) ಪಾಪವು, ಅಂತಿತಃ-ಸಮೀಪದಲ್ಲಿಯಾಗಲಿ, ದೂರಾತ್ ದೂರದಲ್ಲಿಯಾಗಲಿ, ನಾಶ್ನೋತಿ-ಹಿಡಿಯುವುದಿಲ್ಲ.

ಈ ಮಂತ್ರದಲ್ಲಿ ಜೀವನನು ಕರಣಕ್ರಿಯದಿಂದಲೂ ಪರಮಾತ್ಮ

ನನ್ನು ಸೇವಿಸುತ್ತಾನೆ. ಭಗವಂತನ ಅತ್ಯದ್ಭುತವಾದ ಕೀರ್ತಿಯನ್ನು ಭಕ್ತಿಯೊಡನೆ ಹೇಳುವುದರಿಂದ ವಾಚಿಕವ್ಯಾಪಾರವನ್ನು ಹೇಳಿದಂತಾಯಿತು. ಭಗವಂತನು ವೈಷಮ್ಯವೂ ನೈರ್ಘೃಣ್ಯವೂ ಇಲ್ಲದಂತೆ ಜಗದ್ವ್ಯಾಪಾರ ಕಾರ್ಯಗಳನ್ನು ನಡೆಯಿಸುವುದು, ಎಲ್ಲ ಪ್ರಾಣಿಗಳನ್ನೂ ಕಣ್ಣು ಮುಚ್ಚದೆ ನೋಡುತ್ತಿರುವುದು, ಇವೇ ಮೊದಲಾದ ಅವನ ಚಿಹ್ನೆಗಳನ್ನು ಮನದಲ್ಲಿ ನೆನೆವುದರಿಂದ ಮಾನಸಿಕವ್ಯಾಪಾರವು ಹೇಳಲ್ಪಟ್ಟಿತು. ಭಗವಂತನನ್ನು ವ್ರತದೊಡನೆ ಅನ್ನಾದಿಗಳಿಂದ ಉಪಚರಿಸುವುದರಿಂದ ಕಾಯಿಕವ್ಯಾಪಾರವು ಹೇಳಲ್ಪಟ್ಟಿತು. ಈ ರೀತಿಯಲ್ಲಿ ಪರಮಾತ್ಮನ ಸೇವೆಯಲ್ಲಿ ಆಸಕ್ತನಾಗಿರುವವನನ್ನು ರೋಗಾದಿಗಳು ಪೀಡಿಸಲಾರಿವು; ಹಗೆಗಳು ಜಯಿಸಲಾರರು.

ಜಗದೀಶ್ವರನ ಗುಣಗಳನ್ನು ಮನೋವಾಕ್ಕಾಯಗಳಿಂದ ಮಾಡುತ್ತ, ಅವನಿಗೆ ನಿವೇದನೆಯನ್ನು ಮಾಡದೆ ತಾನು ಊಟಮಾಡುವುದಿಲ್ಲವೆಂಬ ನಿಯಮದೊಡನೆ ಇರುವ ಚೇತನನನ್ನು ಪರಮಾತ್ಮನು ಹುಟ್ಟೂ ಅಳಿವೂ ಇಲ್ಲದ ಜ್ಞಾನದಿಂದ ಪ್ರಕಾಶಿಸುವಂತೆ ಮಾಡುವುದಲ್ಲದೆ, ಸ್ವಾನುಭವವೆಂಬ ಪ್ರತ್ಯಕ್ಷಜ್ಞಾನವನ್ನೂ ಕರುಣಿಸುವನೆಂಬುದೇ ಮುಖ್ಯತಾತ್ಪರ್ಯವು. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ಮೂರು ಬಗೆಯಾದ ದುಃಖಗಳೂ ಇವನನ್ನು ಅಂಟಲಾರಿವು. ಇದ ಜನ್ಮದ ಪಾಪಗಳಾಗಲಿ, ಹಿಂದಣ ಜನ್ಮದ ಪಾಪಗಳಾಗಲಿ ಇವನನ್ನು ಬಾಧಿಸಲಾರಿವು. ಭಗವಂತನ ಮಾಹಾತ್ಮ್ಯವು ಎಂತಹುದೋ! ಇಲ್ಲಿ * "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂಬ ಭಗವಂತನ ವಾಕ್ಯವು ನೆನಪಿಗೆ ಬರುವುದು. "ಅದ-ಭಕ್ಷಣೇ" ಎಂಬ ಧಾತುವಿನಿಂದ ಹುಟ್ಟಿದ ಆದಿತ್ಯ ಶಬ್ದವು ಪ್ರಳಯಕಾಲದಲ್ಲಿ ಸಮಸ್ತಪ್ರಾಣಿ

---

* ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ, ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ.
ಸಕಲವಾದ ಧರ್ಮಗಳನ್ನೂ ಬಿಟ್ಟು ನನ್ನನ್ನೇ ಶರಣುಹೊಂದಿದರೆ ನಾನು ನಿನ್ನ ಪಾಪಗಳೆಲ್ಲದರಿಂದಲೂ ಬಿಡಿಸುವೆನು; ನೀನು ದುಃಖಪಡಬೇಡ.

ಗಳನ್ನೂ ತನ್ನ ಒಡಲಲ್ಲಿಟ್ಟುಕೊಂಡು ಪೊರೆಯುವ ಪರಮಾತ್ಮನನ್ನು ಹೇಳುವುದು.

೨೫. ದೇವತಾದ್ಯರಿಗೆ ವಂದನೆಯು.

ಸಂಧ್ಯಾಯೈ ನಮಃ, ಎಂದು ಪೂರ್ವದಿಕ್ಕಿಗೆ;

ಗಾಯತ್ರ್ಯೈ ನಮಃ, ಎಂದು ದಕ್ಷಿಣದಿಕ್ಕಿಗೆ;

ಸಾವಿತ್ರ್ಯೈ ನಮಃ, ಎಂದು ಪಶ್ಚಿಮಕ್ಕೂ;

ಸರಸ್ವತ್ಯೈ ನಮಃ, ಎಂದು ಉತ್ತರಕ್ಕೂ ನಮಸ್ಕಾರಮಾಡುವುದು.

ಸರ್ವಾಭ್ಯೋದೇವತಾಭ್ಯೋನಮೋನಮಃ-ಎಲ್ಲಾ ದೇವತೆಗಳಿಗೂ ನಮಸ್ಕಾರವು.

ಕಾಮೋಽಕಾರ್ಷೀತ್-ಮನ್ಯುರಕಾರ್ಷೀತ್-ನಮೋನಮಃ-ಕಾಮವು ಮಾಡಿತು; ಕೋಪವು ಮಾಡಿತು; ಇದಕ್ಕಾಗಿ ನಮಸ್ಕಾರವು. ನಮಸ್ಕಾರವು, ಆಸೆಗೂ ಕೋಪಕ್ಕೂ ವಶನಾದುದರಿಂದ ನಾನು ಪಾಪಕ್ಕೆ ಗುರಿಯಾದೆನೆಂದು ಪಶ್ಚಾತ್ತಾಪಪಟ್ಟುಕೊಂಡು ಭಗವಂತನನ್ನು ನೆನೆಯುತ್ತ ಜೀತನನು ಮರಳಿಮರಳಿ ಪರಮಾತ್ಮನಿಗೆ ವಂದನೆಯನ್ನು ಮಾಡುವನು.

೨೬. ಹಿಂದಾವೃತ್ತಿ ಅಭಿವಾದನವನ್ನು ಮಾಡುವುದು. ಇದರ ಮಂತ್ರ :—

ಅಭಿವಾದಯೇ .... ತ್ರ್ಯಾರ್ಷೇಯಪ್ರವರಾನ್ವಿತ.... ಗೋತ್ರಃ ....ಸೂತ್ರಃ....ಶಾಖಾಧ್ಯಾಯೀ....ಶರ್ಮಾನಾಮಾಹಂ ಅಸ್ಮಿಭೋಃ.

ಇಂತಹ ಮೂರು ಋಷಿಗಳ ಸಂತತಿಗೆ ಸೇರಿದ, ಇಂತಹ ಋಷಿಯ ವಂಶದಲ್ಲಿ ಹುಟ್ಟಿದ, ಇಂತಹ ಋಷಿಯ ಕಲ್ಪಕ್ಕೆ ಒಳಪಟ್ಟ, ಇಂತಹ ಶಾಖಾಧ್ಯಾಯಿಯಾದ, ಇಂತಹ ಹೆಸರುಳ್ಳ ನಾನು ನಮಸ್ಕರಿಸುವೆನು.

ಅಭಿವಾದ್ಯರಿಗೋಸುಗ ನಾಮೋಚ್ಚಾರಣಾಪೂರ್ವಕವಾಗಿ ನಮಸ್ಕಾರವನ್ನು ಮಾಡುವುದಕ್ಕೆ ಅಭಿವಾದನೆಯೆಂದು ಹೆಸರು. ಮೊದಲು ತನ್ನ ವಂಶಕ್ಕೆ ಸೇರಿದ ಮೂರು ಋಷಿಗಳ ಹೆಸರನ್ನೂ, ತದನಂತರ ತನ್ನ ಗೋತ್ರದ ಋಷಿಯ ಹೆಸರನ್ನೂ, ಬಳಿಕ ತಾನು ಅಭ್ಯಸಿಸುವ

ಧರ್ಮಶಾಸ್ತ್ರಕರ್ತನಾದ ಋಷಿಯ ಹೆಸರನ್ನು, ತಾನು ಅಧ್ಯಯನ ಮಾಡುವ ವೇದಶಾಖೆಯ ಹೆಸರನ್ನೂ, ತನ್ನ ಹೆಸರನ್ನೂ ಹೇಳಬೇಕು. ಇವೆಲ್ಲವೂ ಅಧಿಕಾರಿಯು ವಂಶಾದಿಗಳನ್ನು ತಿಳಿಸುವುದಕ್ಕೆ ಕುರುಹು.

ಉಪಾಸ್ಯದೇವತೆಯಾದ ಭಗವಂತನನ್ನು ತನಗೆ ಅಭಿಮುಖನನ್ನಾಗುವಂತೆ ಮಾಡುವುದಕ್ಕೋಸುಗ ಅಧಿಕಾರಿಯು ತನ್ನ ನಾಮೋಚ್ಚಾರಣಾಪೂರ್ವಕವಾಗಿ ಈ ಮೂಲಕ ಪರಮಾತ್ಮನಿಗೆ ವಂದನೆಯನ್ನು ಮಾಡುತ್ತಾನೆ.

೨೭. ದಿಕ್ಕುಗಳಿಗೆ ಅಂಜಲಿಬದ್ಧನಾಗಿ ಮಾಡುವ ನಮಸ್ಕಾರವು

ಪ್ರಾಚ್ಯೈ ದಿಶೇ ನಮಃ-ಎಂದು ಪೂರ್ವದಿಕ್ಕಿಗೂ,
ದಕ್ಷಿಣಾಯೈ ದಿಶೇ ನಮಃ-ಎಂದು ದಕ್ಷಿಣದಿಕ್ಕಿಗೂ,
ಪ್ರತೀಚ್ಯೈ ದಿಶೇ ನಮಃ-ಎಂದು ಪಶ್ಚಿಮದಿಕ್ಕಿಗೂ,
ಉದೀಚ್ಯೈ ದಿಶೇ ನಮಃ-ಎಂದು ಉತ್ತರದಿಕ್ಕಿಗೂ, ನಮಸ್ಕಾರ;
ಊರ್ಧ್ವಾಯ ನಮಃ-ಮೇಲುಗಡೆಗೆ ನಮಸ್ಕಾರವು;
ಅಧರಾಯ ನಮಃ-ಕೆಳಗಡೆಗೆ ನಮಸ್ಕಾರವು;
ಅಂತರಿಕ್ಷಾಯ ನಮಃ-ಆಕಾಶಕ್ಕೆ ನಮಸ್ಕಾರವು;
ಭೂಮ್ಯೈ ನಮಃ-ಭೂಮಿಗೆ ನಮಸ್ಕಾರವು;
ಬ್ರಹ್ಮಣೇ ನಮಃ-ಪರಬ್ರಹ್ಮಕ್ಕೆ ನಮಸ್ಕಾರವು, ಎಂದು ದಿಗಾದಿಗಳಿಗೆ ವಂದನೆ ಮಾಡುವುದರಿಂದ ಸರ್ವವ್ಯಾಪಿಯಾದ ಪರಮಾತ್ಮನಿಗೆ ನಮಸ್ಕಾರವಾಗುವುದೆಂದು ಅಭಿಪ್ರಾಯವು.

೨೮. ತರುವಾಯ.

ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ। ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ.

ಆಕಾಶದಿಂದ ನೆಲಕ್ಕೆ ಬಿದ್ದ ನೀರೆಲ್ಲವೂ ಹೇಗೆ ಕಡಲನ್ನು ಸೇರುವುದೋ, ಹಾಗೆಯೇ ಎಲ್ಲ ದೇವತೆಗಳಿಗಾಗಿ ಮಾಡಿದ ವಂದನೆಗಳೂ ಕೇಶವನನ್ನು ಕುರಿತು ಹೋಗುತ್ತವೆ.

ಕೇಶವಂ ಪ್ರತಿಗಚ್ಛತಿ ಓಂನಮೋನಮಃ-ನಮಸ್ಸವಿತ್ರೇ ಜಗದೇಕಚಕ್ಷುಷೇ ಜಗತ್ಪ್ರಸೂತಿಸ್ಥಿತಿನಾಶಹೇತವೇ। ತ್ರಯೀಮ

ಮಯಾಯ ತ್ರಿಗುಣಾತ್ಮಧಾರಿಣೇ ವಿರಿಂಚಿನಾರಾಯಣಶಂಕರಾತ್ಮನೇ.

ಎಲ್ಲರಿಗೂ ಒಳ್ಳೆಯದನ್ನು ಮಾಡುವವನೇ, ಲೋಕಗಳಿಗೆಲ್ಲಾ ಒಂದೇ ತೇಜೋರೂಪಿಯಾಗಿರುವವನೇ, ಜಗತ್ತುಗಳ ಹುಟ್ಟು, ಇರವು ಅಳಿವು ಇವುಗಳಿಗೆ ಕಾರಣನಾದವನೇ, ವೇದಮಯನಾದವನೇ, ಮೂರು ಗುಣಗಳಿಂದ ಕೂಡಿದ ಭೂತಗಳನ್ನು ಧರಿಸಿಕೊಂಡಿರುವವನೇ, ಬ್ರಹ್ಮವಿಷ್ಣುಮಹೇಶ್ವರಸ್ವರೂಪಿಯೂ, ಎಲೈ ಸೂರ್ಯನೇ, ನಿನಗೆ ನಮಸ್ಕಾರವು.

ಧ್ಯೇಯಸ್ಸದಾ ಸವಿತೃಮಂಡಲಮಧ್ಯವರ್ತೀ ನಾರಾಯಣಸ್ಸರಸಿಜಾಸನಸನ್ನಿವಿಷ್ಟಃ। ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುಃ ಧೃತಶಂಖಚಕ್ರಃ.

ಸೂರ್ಯಮಂಡಲದ ನಡುಗಡೆಯಲ್ಲಿರುವ ತಾವರೆಯ ಆಸನದಲ್ಲಿ ಚೆನ್ನಾಗಿ ಕುಳಿತುಕೊಂಡಿರುವ, ತೋಳು ಬಳೆಗಳು ಮಕರಕುಂಡಲಗಳು ಕಿರೀಟಹಾರಗಳೊಡನೆ ಕೂಡಿಕೊಂಡಿರುವ, ಸ್ವರ್ಣಮಯವಾದ ಶರೀರವುಳ್ಳ, ಶಂಖಚಕ್ರಗಳನ್ನು ಧರಿಸಿದವನಾಗಿರುವ ಶ್ರೀಮನ್ನಾರಾಯಣನೇ ಯಾವಾಗಲೂ ಚೆನ್ನಾಗಿ ಧ್ಯಾನಿಸಲ್ಪಡತಕ್ಕವನು.

ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ ।
ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಂ ॥

ತನ್ನನ್ನು ಆಶ್ರಯಮಾಡಿದವರ ಹಗೆಗಳನ್ನು ಧ್ವಂಸಮಾಡತಕ್ಕವನೇ! ಯಾವಾಗಲೂ ಶಂಖಚಕ್ರಗದೆಗಳನ್ನು ಕೈಗಳಲ್ಲಿ ಹಿಡಿದುಕೊಂಡಿರುವ, ಪರಮಪದದಲ್ಲಿ ಇದ್ದರೆ ಆಶ್ರಿತರನ್ನು ರಕ್ಷಿಸುವುದಕ್ಕೆ ಸಾವಕಾಶವಾದೀತೆಂದು ನೆನೆದು, ಶ್ರೀಮದ್ದ್ವಾರಕಾಪಟ್ಟಣದಲ್ಲಿ ವಾಸಮಾಡುವ, ಆಶ್ರಿತರನ್ನು ಕೈಬಿಡದಿರುವ, ಹಸುಗಳಂತೆ ಅಜ್ಞಾನಿಗಳಾದವರನ್ನು ಕಾಪಾಡುವ, ವೇದದಲ್ಲಿ ಹೇಳಿರುವ ಪರಬ್ರಹ್ಮಲಕ್ಷಣಕ್ಕೆ ತಕ್ಕುದಾದ, ತಾವರೆಯಂತಿರುವ ಕಣ್ಣುಗಳುಳ್ಳ ದೇವನೇ, ನಿನ್ನನ್ನು ಮರೆಹೊಕ್ಕಿರುವ ನನ್ನನ್ನು ಕಾಪಾಡು.

೨೯. ಒಮ್ಮೆ ಆಚಮನವನ್ನು ಮಾಡಬೇಕು.

೩೦. ಅಜಮುಖಗಳಿಂದನ್ನು ಮಾಡಿ ಈ ಶ್ಲೋಕವನ್ನು ಹೇಳುವುದು.

೩೧. **ಶ್ರೀರಂಗಮಂಗಳಮಣಿಂ ಕರುಣಾನಿವಾಸಂ ಶ್ರೀವೇಂಕಟಾದ್ರಿಶಿಖರಾಲಯಕಾಲಮೇಘಂ ॥ ಶ್ರೀಹಸ್ತಿಶೈಲಶಿಖರೋಜ್ವಲಪಾರಿಜಾತಂ ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ.**

ಶ್ರೀರಂಗಕ್ಷೇತ್ರಕ್ಕೆ ಮಂಗಳರತ್ನವಾದ, ಮರುಕಕ್ಕೆ ತೌರುಮನೆಯಾದ ಶ್ರೀರಂಗನಾಥನನ್ನು, ಶ್ರೀವೇಂಕಟಪರ್ವತದ ಶಿಖರದಲ್ಲಿ ಕಪ್ಪು ಮೋಡದಂತಿರುವ ಶ್ರೀನಿವಾಸದೇವರನ್ನು, ಶ್ರೀಹಸ್ತಿಗಿರಿಯ ಶಿಖರದಲ್ಲಿ ಚೆನ್ನಾಗಿ ಹೊಳೆಯುವ ಕಲ್ಪವೃಕ್ಷದಂತಿರುವ ಕಾಂಚೀಪಟ್ಟಣದ ವರದರಾಜಸ್ವಾಮಿಯನ್ನು, ಯದುಗಿರಿಗೆ ದೀಪದಂತಿರುವ ಶ್ರೀನಾರಾಯಣಸ್ವಾಮಿಯನ್ನು ತಲೆಬಾಗಿ ವಂದಿಸುವೆನು.

ಬಳಿಕ ಮನೆದೇವರಿಗೂ ಗುರುಹಿರಿಯರಿಗೂ ವಂದನೆಮಾಡುವುದು.

ಪ್ರಾತಸ್ಸಂಧ್ಯಾವಂದನಂ ಸಂಪೂರ್ಣಂ

ಸಾಯಂ ಸಂಧ್ಯಾವಂದನೆಯು.

ಇದನ್ನು ಪಶ್ಚಿಮಾಭಿಮುಖನಾಗಿಯಾಗಲಿ, ಉತ್ತರಾಭಿಮುಖನಾಗಿಯಾಗಲಿ ಮಾಡತಕ್ಕದ್ದು.

(ಪ್ರಾತಸ್ಸಂಧ್ಯಾವಂದನೆಗೂ ಇದಕ್ಕೂ ಇರುವ ವ್ಯತ್ಯಾಸಗಳು ಮಾತ್ರ ತೋರಿಸಲ್ಪಟ್ಟಿವೆ)

೧. ಸಂಕಲ್ಪವು.

ಶ್ರೀಭಗವದಾಜ್ಞಯಾ... ಸಾಯಂಸಂಧ್ಯಾವಂದನಂಕರಿಷ್ಯೇ.

೨. ಅಪ್ರೋಕ್ಷಣವು.

ಅಗ್ನಿಶ್ಚ ಮಾಮನ್ಯುಶ್ಚ .... ಯದಹ್ನಾಪಾಪಮಕಾರಿಷಂ ಅಹಸ್ತದವಲುಂಪತು ; ಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ.

ಅಗ್ನಿಶ್ಚ-ಅಗ್ನಿಯೂ .... ಅಹ್ನಾ-ಹಗಲಿನಲ್ಲಿ, ಅಹಃ-ಅಹಸ್ಸಿಗೆ ನಾಯಕನಾದ ಭಗವಂತನು .... ಸತ್ಯೇ-ಸತ್ಯರೂಪನಾದ .... (ಋಕ್ಕುಗಳೆಲ್ಲವೂ "ಸೂರ್ಯಶ್ಚ ಮಾಮನ್ಯುಶ್ಚ" ಎಂಬ ಅನುವಾಕದಲ್ಲಿರುವಂತೆಯೇ).

"ಅಗ್ರಂ ನಯತೀತ್ಯಗ್ನಿಃ" ಎಂದರೆ ಯಾವನು ಮುಖ್ಯಸ್ಥಾನವನ್ನು ಹೊಂದಿಸುವನೋ ಆತನಿಗೆ ಅಗ್ನಿಯೆಂದು ಹೆಸರು. ಅಗ್ನಿಶಬ್ದವು ಪರಮಾತ್ಮವಾಚಕವು. "ನಹೀಯತೇ ಅಸ್ಯ ಇತಿ ಅಹಃ" ಯಾವನೊಬ್ಬನು ಯಾರನ್ನಾಗಲಿ ಹೀನನಾದವನೆಂದು ತ್ಯಜಿಸದಿರುವನೋ ಅವನಿಗೆ ಅಹಸ್ ಎಂದು ಹೆಸರು. ಇದೂ ಪರಮಾತ್ಮವಾಚಿಯಾದುದು. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಹೇಳುವ ಶ್ರುತಿಯಂತೆ ಸತ್ಯಶಬ್ದಕ್ಕೆ ಪರಮಾತ್ಮನೆಂಬ ಹೆಸರು.

(ಶೇಷವಾದ ಋಕ್ಕುಗಳೆಲ್ಲವನ್ನೂ ಪ್ರಾತಸ್ಸಂಧ್ಯಾವಂದನೆಯ ಕಾಲದಲ್ಲಿ ಮಾಡಿದಂತೆಯೇ ಮಾಡಿ ಜಪವನ್ನು ಪೂರೈಸಿ)

೨೮. ಉಪಸ್ಥಾನವು.

ಓಂ ಭಗವನ್ನಾಜ್ಞಯಾ .... ಸಾಯಂಸಂಧ್ಯೋಪಸ್ಥಾನಂ ಕರಿಷ್ಯೇ ಎಂದು ಹೇಳಿ ಪಶ್ಚಿಮಾಭಿಮುಖನಾಗಿ ನಿಂತು ಕೈಗಳನ್ನು ಮುಗಿದುಕೊಂಡು,

ಉತ್ತಮೇ ಶಿಖರೇ.......ಯಥಾಸುಖಂ.

ಇಮಂ ಮೇ ವರುಣ ಶ್ರುಧೀಹವಮದ್ಯಾಚಮೃಡಯ; ತ್ವಾಮವಸ್ಯುರಾಚಕೇ; ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಃ ತದಾಶಾಸ್ತೇ ಯಜಮಾನೋಹವಿರ್ಭಿಃ; ಅಹೇಡಮಾನೋ ವರುಣೇಹಬೋಧ್ಯುರುಶಗ್ಂಸಮಾನಃ ಆಯುಃಪ್ರಮೋಷೀಃ; ಯಚ್ಚಿದ್ಧಿತೇ ವಿಶೋಯಥಾ ಪ್ರದೇವ ವರುಣ ವ್ರತಂ; ಮಿನೀಮಸಿ ದ್ಯವಿದ್ಯವಿ; ಯತ್ಕಿಂಚೇದಂ ವರುಣ ದೈವ್ಯೇ ಜನೇಽಭಿದ್ರೋಹಂ ಮನುಷ್ಯಾಶ್ಚರಾಮಸಿ; ಅಚಿತ್ತೀಯತ್ತವಧರ್ಮಾಯುಯೋಪಿಮಮಾನಸ್ತಸ್ಮಾದೇನಸೋದೇವ ರೀರಿಷಃ; ಕಿತವಾಸೋಯದ್ರಿರಿಪುರ್ನದೀವಿ ಯದ್ವಾಘಾಸತ್ಯಮುತಯನ್ನವಿದ್ಮ; ಸರ್ವಾತಾವಿಷ್ಯ ಶಿಥಿರೇವ ದೇವಾಥಾತೇಸ್ಯಾಮ ವರುಣ ಪ್ರಿಯಾಸಃ.

ಹೇವರುಣ-ಎಲೈ ವರುಣಾಭಿಮಾನಾತ್ಮನೇ, ಮೇ-ನನ್ನ, ಇಮಂ-ಈ, ಹವಂ-ಪ್ರಾರ್ಥನೆಯನ್ನು, ಶ್ರುಧಿ-ಕೇಳು, ಅದ್ಯಾಚ-ಈಗಲೇ, ಮೃಡಯ-ನನ್ನನ್ನು ಸುಖಿಯಾಗುವಂತೆ ಮಾಡು, ಅವಸ್ಯುಃ-ನನ್ನ ಪಾಲನೆಯನ್ನು ಬಯಸಿದವನಾಗಿ, ತ್ವಾಂ-ನಿನ್ನ, ಆಚಕೇ-ತೃಪ್ತಿಯನ್ನು ಬೇಡುವೆನು, ತತ್-ಆ, ತ್ವಾ-ನಿನ್ನನ್ನು, ಬ್ರಹ್ಮಣಾ ವೇದದಿಂದ, ವಂದಮಾನಃ-ನಮಸ್ಕರಿಸುವನಾಗಿ, ಯಾಮಿ-ಶರಣುಹೊಂದುವೆನು; ಯಜಮಾನಃ-ಯಾಗಮಾಡುವವನು, ಹವಿರ್ಭಿಃ-ಪುರೋಡಾಶ ಮೊದಲಾದುವುಗಳಿಂದ, ತತ್-ಮೇಲೆ ಹೇಳಿದ ಸುಖರೂಪವಾದ ಫಲವನ್ನು, ಆಶಾಸ್ತೇ-ಬಯಸುವನು; ಹೇ ವರುಣ-ಎಲೈ ವರುಣನೇ, ಅಹೇಡಮಾನಃ-ಮುಳಿಸಿಲ್ಲದವನಾಗಿ, ಇಹ-ಈ ಲೋಕದಲ್ಲಿ, ಬೋಧಿ-ನನ್ನ ಯಾಚನೆಯನ್ನು ಅಂಗೀಕರಿಸು; ಉರುಶಂಸ-ದೊಡ್ಡ ಕೀರ್ತಿಯುಳ್ಳವನೇ, ನಃ-ನಮ್ಮ, ಆಯುಃ-ಆಯುಸ್ಸನ್ನು, ಮಾಪ್ರಮೋಷೀಃ-ದಾಟಿಸ

ಪಾಠಭೇದ, ಹೇ ದೇವ ವರುಣ-ಎಲೈ ವರುಣದೇವನೇ, ಯಚ್ಚಿತ್-ಯಾವ. (ಚಿತ್, ಹಿ-ಅವ್ಯಯಗಳು) ವ್ರತಂ ಆರಾಧನಾರೂಪವಾದ ವ್ರತವನ್ನು, ದ್ಯವಿದ್ಯವಿ-ಪ್ರತಿ ದಿನದಲ್ಲಿಯೂ, ವಿಶೋಯಥಾ-ವಿನೀತ ತಿಳಿಯದ ಮನುಷ್ಯರಂತೆ, ಪ್ರಮಿನೀಮಸಿ-ನಾಶಮಾಡುವವರಾಗಿ ಹೋಗುವೆವೋ; ಹೇ ವರುಣ-ಎಲೈ ವರುಣನೇ, ದೈವ್ಯೇ ಜನೇ-ದೇವತೆಗಳಲ್ಲಿ, ಮನುಷ್ಯಾಃ-ಮನುಷ್ಯರಾದ ನಾವು, ಯತ್ಕಿಂಚ ಯಾವುದಾದರೂ. ಇದಂ-ಈ ಕರಣವಾದ, ಅಭಿದ್ರೋಹಂ-ದ್ರೋಹವನ್ನು, ತಪ್ಪನ್ನು, ಅಚಿತ್ತೀ-ಚಿತ್ತವಿಕಾರದಲ್ಲಿ ವಿರುದ್ಧವಿಂದ, ಚರಾಮಸಿ-ನಡೆಸುವೆವೋ, ಯತ್-ಯಾವ ಕಾರಣದಿಂದ, ತವ ನಿನ್ನ, ಧರ್ಮಾ-ಧರ್ಮವನ್ನು. ಯುಯೋಪಿಮ-ನಾಶಮಾಡಿದೆವೋ, ಹೇ ದೇವ ಎಲೈ ದೇವತೆಯೇ, ನಃ-ನಮ್ಮನ್ನು, ತಸ್ಮಾತ್-ಆ ಕಾರಣದಿಂದ ಉಂಟಾದ, ಏನಸಃ-ಪಾಪಕ್ಕೋಸ್ಕರ ಮಾ ರೀರಿಷಃ-ಹಿಂಸೆಮಾಡಬೇಡ, ಕಿತವಾಸಃ-ಕಪಟಿಗಳಂತೆ ನಾವು, ರಿರಿಪುರ್ನ-ಜಗಗಳಂತೆ, ದೀವಿ-ಜೂಜಿನಲ್ಲಿ ಚಟವನ್ನು ಆಡಿದೆವೋ, ಯತ್-ಯಾವ ಪಾಪವನ್ನು, (ವಾ ಘಾ ಅವ್ಯಯ) ಸತ್ಯಂ ತಿಳಿದು ಮಾಡಿದೆವೋ, ಉತ-ಮತ್ತು, ಯತ್ ಯಾವ ಪಾಪವನ್ನು, ನವಿದ್ಮ ತಿಳಿಯದೆ ಮಾಡಿದೆವೋ, ತಾ ಸರ್ವಾ-ಆ ಪಾಪಗಳೆಲ್ಲವನ್ನು, ವಿಷ್ಯ-ಹೋಗಲಾಡಿಸು, ಶಿಥಿರಾ ಇವ-ಅಶ್ವಗಳು [illegible]; ಹೇ ವರುಣ ದೇವ-ಎಲೈ ವರುಣದೇವನೇ, ಅಧಾ-ಬಳಿಕ, ತೇ ನಿನಗೆ, ಪ್ರಿಯಾಸಃ-ಇಷ್ಟರಾದವರಾಗಿ, ಸ್ಯಾಮ-ಆಗುತ್ತೇವೆ.

“ವೃಞ್ ವರಣೇ” ಎಂಬ ಧಾತುವಿಂದ ಹುಟ್ಟಿದ ವರುಣ ಶಬ್ದಕ್ಕೆ ಚೇತನಾಚೇತನಾತ್ಮಕವಾದ ಸಮಸ್ತಲೋಕವನ್ನು ಆವರಿಸಿಕೊಂಡಿರುವ ಪರಮಾತ್ಮನೆಂದು ಹೇಳಲಾಗುವುದು. “ಅಹ ತ್ವಸ್ಮಿ” ಎಂಬುದರಿಂದುಂಟಾದ “ಅಹಕೇ” ಎಂಬುದಕ್ಕೆ ತೃಪ್ತಿಯನ್ನು ಪಡೆಯುವನೆಂದು ಅಭಿಪ್ರಾಯ; ಶರಣ್ಯನಾದ ನೀನು ಶರಣಾಗತನಾದ ನನ್ನ ಕೋರಿಕೆಗಳನ್ನು ಕೊಟ್ಟು ಉದ್ಧಾರಮಾಡಬೇಕೆಂದು ದೇವರಲ್ಲಿ ಬೇಡಿಕೊಳ್ಳುವುದು.

ಎಲೈ ವರುಣನೇ, ನೀನು ಶರಣುಹೊಕ್ಕವರಲ್ಲಿ ಮರುಕಗೊಳ್ಳುವ ನಂಬುವದು ಶಾಸ್ತ್ರೋಪಾಖ್ಯಾನಾದಿಗಳಲ್ಲಿ ಪ್ರಖ್ಯಾತವಾಗಿದ್ದವೇ ! ಆದರಿಂದ ಈ ನನ್ನ ಪ್ರಾರ್ಥನೆಯನ್ನು ಲಾಲಿಸಿ ಈಗಲೇ ನನಗೆ ಮುಕ್ತಿಯನ್ನು ಕೊಡುವವನಾಗು ; ನಿನ್ನನ್ನು ಆಶ್ರಯಿಸಿದವನಿಗೆ ಉತ್ಕೃಷ್ಟ ಫಲವು ತಪ್ಪುವುದಿಲ್ಲವಾದುದರಿಂದಲೇ ಶ್ರೌತನವರ್ಗದ ಯಾಗಾದಿ ಕರ್ಮಗಳನ್ನು ಮಾಡಿ ಸ್ವರ್ಗಸುಖರೂಪವಾದ ಫಲವನ್ನು ಪಡೆಯುವುದು. ಕರ್ಮಜ್ಞಾನಭಕ್ತಿವಿರಕ್ತಿಗಳಲ್ಲಿ ಪ್ರಥಮಪರ್ವವಾದ ಕರ್ಮವನ್ನು ಆಚರಿಸಿದವನಿಗೆ ಫಲವು ತಪ್ಪದಿರುವಾಗ, ಅನಾಥರಕ್ಷಕರುಣಾಶಾಲಿಯಾದ ನಿನ್ನನ್ನು ನಂಬಿದವನಿಗೆ ಫಲಪ್ರಾಪ್ತಿಯಾಗುವುದೆಂದು ಹೇಳತಕ್ಕದೇನಿದೆ. ಮೂಢನಾದ ನಾನು ತಿಳಿಯದೆಯಾಗಲಿ, ತಿಳಿದಾಗಲಿ ಬಹುಕಾಲದಿಂದ ಮಾಡಿರುವ ಅಕೃತ್ಯಕರಣ, ಕೃತ್ಯಾಕರಣ, ಭಗವದಪಚಾರ, ಭಾಗವತಾಪಚಾರ, ಅಸಹ್ಯಾಪಚಾರವೇ ಮೊದಲಾದ ನಾಲ್ಕು ವಿಧವಾದ ಕೊನೆಗಾಣದ ಅಪಚಾರಗಳನ್ನು ನೀನು ತಿಳಿದೂ ಕೂಡ ನನ್ನನ್ನು ದಂಡಿಸದೆ, " ನಾನು ನಿನ್ನ ಮರೆಹೊಕ್ಕಿರುವೆನು " ಎಂಬ ಮಾತ್ರದಲ್ಲಿಯೇ ತೃಪ್ತಿಪಟ್ಟು ನನ್ನ ಪಾಪಗಳೆಲ್ಲವನ್ನೂ ನಿರ್ಮೂಲವಾಗಿ ದಯಾಹೀನನಾದ ನನಗೆ ದಯಾಸಿಂಧುವಾದ ನೀನು ಎಂದಿಗೂ ತಪ್ಪದಿರುವ ನಿನ್ನಾಶೆಗಳನ್ನು ಮಾಡಿಕೊಂಡಿರುವಂತೆ ದಯಮಾಡಿಸಿ ನನ್ನನ್ನು ಪಾಲಿಸಬೇಕೆಂದು ದೃಢಭಕ್ತಿಯಿಂದ ನಿನ್ನನ್ನು ಹೊಗಳುತ್ತಲಿರುವೆನು.

ಉಳಿದುದೆಲ್ಲವೂ ಪ್ರಾತಸ್ಸಂಧ್ಯಾವಂದನೆಯಲ್ಲಿರುವಂತೆ ನಡೆಸಲ್ಪಡತಕ್ಕದ್ದು.

ಸಾಯಂಸಂಧ್ಯಾವಂದನಂ ಸಮಾಪ್ತಂ.

ಮಾಧ್ಯಾಹ್ನಿಕಕ್ರಮ.

ಮಾಧ್ಯಾಹ್ನಿಕವೆಂದರೆ ಮಧ್ಯಾಹ್ನದಲ್ಲಿ ಮಾಡತಕ್ಕಂಥ ಕರ್ಮವು. ಇದಕ್ಕೂ ಸಂಧ್ಯಾವಂದನೆಗಳಿಗೂ ಇರುವ ವ್ಯತ್ಯಾಸವು ಮಾತ್ರ ಇಲ್ಲಿ ಸೂಚಿತವಾಗಿರುವುದು.

೧. ಸಂಕಲ್ಪಃ :—

ಶ್ರೀಭಗವದಾಜ್ಞಯಾ.. ಮಾಧ್ಯಾಹ್ನಿಕಂ ಕರಿಷ್ಯೇ.

೨. ಆಪೋಶನಮಂತ್ರಃ :—

ಆಪಃ ಪುನಂತು ಪೃಥಿವೀಂ ; ಪೃಥಿವೀ ಪೂತಾ ಪುನಾತು ಮಾಂ ; ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮಪೂತಾ ಪುನಾತು ಮಾಂ; ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ ; ಸರ್ವಂ ಪುನಂತು ಮಾಮಾಪೋಽಸತಾಂಚ ಪ್ರತಿಗ್ರಹಗ್ಂ ಸ್ವಾಹಾ.

ಆಪಃ-ನೀರುಗಳು, ಪೃಥಿವೀಂ-ಭೂಮಿಯನ್ನು, ಪುನಂತು-ಪರಿಶುದ್ಧವನ್ನಾಗಿ ಮಾಡಲಿ. ಪೂತಾ-ಪರಿಶುದ್ಧವಾದ, ಪೃಥಿವೀ-ಭೂಮಿಯು, ಮಾಂ-ನನ್ನನ್ನು, ಪುನಾತು-ಪರಿಶುದ್ಧನನ್ನಾಗಿ ಮಾಡಲಿ; ಬ್ರಹ್ಮಣಃ-ಚತುರ್ಮುಖನಿಗೆ, ವೇದಕ್ಕೆ, ಪತಿಃ-ಸ್ವಾಮಿಯಾದ ಪರಮಾತ್ಮನು, ಪುನಂತು (ನನ್ನನ್ನು) ಪರಿಶುದ್ಧನನ್ನಾಗಿ ಮಾಡಲಿ; ಬ್ರಹ್ಮಪೂತಾಃ-ವೇದಮಂತ್ರದಿಂದ ಪರಿಶುದ್ಧಮಾಡಲ್ಪಟ್ಟ, ಜಲಗಳು, ಮಾಂ-ನನ್ನನ್ನು, ಪುನಾತು-ಪರಿಶುದ್ಧನನ್ನಾಗಿ ಮಾಡಲಿ; ಯತ್ ಮಮ, ಉಚ್ಛಿಷ್ಟಂ-ಎಂಜಲಾದುದು ತಿನ್ನಲ್ಪಟ್ಟಿತೋ, ಅಭೋಜ್ಯಂ-ತಿನ್ನಬಾರದುದು ತಿನ್ನಲ್ಪಟ್ಟಿತೋ, ಯದ್-ಯಾವುದೊಂದು, ([illegible]) ಮಮ-ನನಗೆ, ದುಶ್ಚರಿತಂ-ದುರ್ನಡತೆಯೋ, ಅಸತಾಂ-ಅಯೋಗ್ಯರಿಂದ, ಪ್ರತಿಗ್ರಹಂ-ದಾನವನ್ನು ತೆಗೆದುಕೊಂಡುದು

ಉಂಟೋ, ಸರ್ವಂಚ-ಈ ಎಲ್ಲಾ ಪಾತಕಗಳನ್ನೂ; ಅಪಃ-ನೀರು, ಶುದ್ಧಂತು-ಪರಿಶುದ್ಧವನ್ನಾಗಿಮಾಡಲಿ; ಮಾಂ ಚ-ಈ ಮೂಲಕವಾಗಿ ನನ್ನನ್ನು ಕೂಡ ಪರಿಶುದ್ಧನನ್ನಾಗಿ ಮಾಡಲಿ, ಸ್ವಾಹಾ-ಇದು ಆಹುತಿ ಮಂತ್ರವು.

ಎಂಜಲನ್ನು ತಿನ್ನುವುದರಿಂದ ದೇಹದ ಆರೋಗ್ಯವು ಕೆಡುವುದು. ದೇಹಾರೋಗ್ಯವು ಕೆಡುವುದರಿಂದ ಮನಸ್ಸು ಕೆಟ್ಟುಹೋಗುವುದು. ತಿನ್ನಬಾರದುದನ್ನು ತಿನ್ನುವುದರಿಂದಲೂ ಶರೀರಾರೋಗ್ಯವು ಹಾಳಾಗಿ ಬುದ್ಧಿಯೂ ಸಂಕೋಚವಾಗುವುದು. ಈ ವಿಚಾರದಲ್ಲಿ ಶಾಸ್ತ್ರಕಾರರು ಬಹು ಖಂಡಿತವಾಗಿ ಕಟ್ಟಳೆಗಳನ್ನು ನಿಯಮಿಸಿರುವರು. ಅಯೋಗ್ಯರಾದವರಿಂದ ದಾನವನ್ನು ತೆಗೆದುಕೊಳ್ಳುವುದು ಪಾಪಕಾರ್ಯವೆಂದು ಹಿರಿಯರು ಹೇಳುವರು. ಈ ಮೇಲೆ ಕಂಡ ಮೂರು ಬಗೆಯಾದ ಅಕಾರ್ಯಗಳನ್ನು ಮಾಡುವುದರಿಂದ ಮನುಷ್ಯನಿಗೆ ಹೆಚ್ಚಾಗಿ ಪಾಪ ಕಾರ್ಯಗಳನ್ನು ಮಾಡತಕ್ಕ ಸಂಭವವುಂಟಾಗುವುದು. ಜಲವು ನೆಲದ ಮೇಲೆ ಬೀಳುವುದರಿಂದ ಭೂಮಿಯ ಮೇಲಿರುವ ಕೊಳಕೆಲ್ಲಾ ಹೋಗಿ ಆ ನೆಲವು ಫಲವತ್ತಾಗುವುದು. ಭೂಮಿಯ ಮೇಲೆ ಬಿದ್ದ ನೀರನ್ನು ಕುಡಿವುದರಿಂದ ಮನುಷ್ಯನು ವೃದ್ಧಿಯನ್ನು ಹೊಂದುವನು.

"ಅಪ್ಸ್ವಂತ ಇತ್ಯಾದಿ" ಎಲ್ಲರಿಂದಲೂ ಪಾಪವು ಹೊಂದಲ್ಪಡುವುದೋ ಅದಕ್ಕೆ ಅಪವೆಂದು ಹೆಸರು. ಇದರಿಂದ ಪರಮಾತ್ಮನು ನಿರ್ದಿಷ್ಟನಾಗುವನು. ಜಲವು ಪರಮಾತ್ಮನಿಗೆ ಮುಖ್ಯಸ್ಥಾನವಾದುದರಿಂದಲೂ, ಪರಮಾತ್ಮನು ಭೂಮಿಮಂಡಲಕ್ಕೆ ಒಡೆಯನಾದುದರಿಂದಲೂ, ಜಲವೂ ಭೂಮಿಯೂ ಪಾವನವಾದುವು ಎಂಬುದರಲ್ಲಿ ಸಂಶಯವಾವುದೂ ಇಲ್ಲ. ಈ ಮಂತ್ರಪಠನೆಯಿಂದ ಚೇತನನು ತಾನು ಮನಸ್ಸಿನಿಂದಲೂ ಮಾತಿನಿಂದಲೂ, ಕಾರ್ಯದಿಂದಲೂ ಮಾಡಿದ ಮೂರು ತೆರನಾದ ಪಾತಕಗಳನ್ನೂ ನಾಶಗೊಳಿಸಿ ತನ್ನನ್ನು ಉದ್ಧಾರ ಮಾಡೆಂದು ಪರಮಾತ್ಮನಲ್ಲಿ ಮೊರೆಯಿಟ್ಟು ಆತ್ಮಸಮರ್ಪಣೆಯನ್ನು ಮಾಡುವನು.

೨೮ಕ ೩ ಅರ್ಘ್ಯಗಳು.

೧ ಪ್ರಾಣಾಯಾಮವು.

೧ ಅರ್ಘ್ಯವು.

ಕರಣಾಯ ಮುಕ್ಕವೆಲ್ಲವನ್ನೂ ಸಂಧ್ಯಾವಂದನೆಯ ಕಾಲದಲ್ಲಿ ಮಾಡಿದಂತೆಯೇ ಮಾಡಿ ಜಪವನ್ನು ಪೂರೈಸಿ.

೨೯. ಉಪಸ್ಥಾನವು.

ಶ್ರೀ ಭಗವದಾಜ್ಞಯಾ............ ಮಾಧ್ಯಾಹ್ನಿಕೋಪಸ್ಥಾನಂ ಕರಿಷ್ಯೇ.

ಸೂರ್ಯಾಭಿಮುಖವಾಗಿ ನಿಂತುಕೊಂಡು ತನ್ಮಂಡಲಮಧ್ಯದಲ್ಲಿರುವ ಪರಮಾತ್ಮನನ್ನು ಮನದಲ್ಲಿ ಧ್ಯಾನಿಸುತ್ತ.

ಉತ್ತಮೇ ಶಿಖರೇ............ಯಥಾಸುಖಂ.

ಆಸತ್ಯೇನ ರಜಸಾ ವರ್ತಮಾನೋ ನಿವೇಶಯನ್ ಅಮೃತಂ ಮರ್ತ್ಯಂಚ; ಹಿರಣ್ಯಯೇನ ಸವಿತಾರಥೇನ ಆದೇವೋ ಯಾತಿ ಭುವನಾವಿಪಶ್ಯನ್; ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಂ; ದೇವಂ ದೇವತ್ರಾಸೂರ್ಯಮಗನ್ಮಜ್ಯೋತಿರುತ್ತಮಂ; ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ; ದೃಶೇ ವಿಶ್ವಾಯ ಸೂರ್ಯಂ; ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ; ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾಜಗತಸ್ತಸ್ಥುಷಶ್ಚ; ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್; ಪಶ್ಯೇಮ ಶರದಶ್ಶತಂ; ಜೀವೇಮ ಶರದಶ್ಶತಂ; ನಂದಾಮ ಶರದಶ್ಶತಂ; ಮೋದಾಮ ಶರದಶ್ಶತಂ; ಭವಾಮ ಶರದಶ್ಶತಂ; ಶೃಣವಾಮ ಶರದಶ್ಶತಂ; ಪ್ರಬ್ರವಾಮ ಶರದಶ್ಶತಂ; ಅಜೀತಾಸ್ಯಾಮ ಶರದಶ್ಶತಂ; ಜ್ಯೋಕ್ಚ ಸೂರ್ಯಂ ದೃಶೇ; ಯ ಉದಗಾತ್ ಮಹತೋಽರ್ಣವಾತ್ ವಿಭ್ರಾಜಮಾನಸ್ಸರಿರಸ್ಯ ಮಧ್ಯಾತ್ ಸಮಾ ವೃಷಭೋ ಲೋಹಿತಾಕ್ಷಸ್ಸೂರ್ಯೋ ವಿಪಶ್ಚಿನ್ಮನಸಾ ಪುನಾತು.

ಸತ್ಯೇನ-ಕಾಲದಿಂದುಂಟಾಗುವ ವ್ಯತ್ಯಾಸವನ್ನು ಹೊಂದದ ಸತ್ಯ ಲೋಕವನ್ನೂ, ರಜಸಾ-ತ್ರಿಗುಣವಿಶಿಷ್ಟವಾದ ಲೀಲಾವಿಭೂತಿಯನ್ನು ಆವರಿಸಿಕೊಂಡು, ವರ್ತಮಾನಃ-ಪ್ರಮಾಣಗಳಿಂದ ತಿಳಿಯುವನಾದ, ದೇವಸ್ಸವಿತಾ-ಸವಿತೃಪರಮಾತ್ಮನು, ಅಮೃತಂ-ನಿತ್ಯಮುಕ್ತರಿಗೆ ಬ್ರಹ್ಮಾನುಭವವನ್ನು, ಮರ್ತ್ಯಂಚ-ಮನುಷ್ಯರಿಗೆ ಐಶ್ವರ್ಯಕೈವಲ್ಯಪುತ್ರಾದಿ ರೂಪವಾದ ಐಹಿಕಸುಖವನ್ನು, ನಿವೇಶಯನ್-ಕೊಡುವವನಾಗಿ, ಹಿರಣ್ಯಯೇನ-ಸ್ವರ್ಣಮಯವಾದ, ರಥೇನ-ಗರುಡನೆಂಬ ರಥದಿಂದ, ಭುವನಾ-ಲೋಕಗಳನ್ನು, ಪಶ್ಯನ್-ಅವರವರ ಕರ್ಮಕ್ಕೆ ತಕ್ಕಂತೆ ನಡೆಯಿಸುವ ಪ್ರವರ್ತಕನಾಗಿ, ಆ ಎಲ್ಲೆಡೆಯಲ್ಲಿಯೂ, ಯಾತಿ-ಸಂಚರಿಸುತ್ತಾನೆ-(ಇಂಥವನನ್ನು ನಾನು ಉಪಾಸನೆಮಾಡುವೆನು.) ತಮಸಸ್ಪರಿ-ಪ್ರಕೃತಿಗೆ ಮೇಲಿರುವ, ಅಂಧಕಾರವನ್ನು ಹೋಗಗೊಳಿಸುವ, ಉತ್ತರಂ-ಉತ್ಕೃಷ್ಟತರವಾದ, ಜ್ಯೋತಿಃ-ತೇಜೋರೂಪನಾದ ಪರಮಾತ್ಮನನ್ನು, ಉತ್ಪಶ್ಯಂತಃ-ಧ್ಯಾನಿಸುತ್ತಲಿರುವ, ವಯಂ-ನಾವು, ದೇವತ್ರಾ ದೇವತೆಗಳಲ್ಲಿಯೂ, (ಇಲ್ಲಿ ದೇವತ್ರಾ ಪದ ಸರ್ವವಸ್ತುಗಳಿಗೂ ಉಪಲಕ್ಷಣವು) ಉತ್ತಮಂ ದೇವಂ-ಉತ್ಕೃಷ್ಟತಮದೇವನಾದ, ಜ್ಯೋತಿಃ ತೇಜೋರೂಪನಾದ, ಸೂರ್ಯಂ-ಪರಮಾತ್ಮನನ್ನು, ಅಗನ್ಮ-ಹೊಂದುವೆವು (ಉದುತ್ಯಂ = ಉತ್ + ಉ + ತ್ಯಂ) ಉ ಅವ್ಯಯಃ, ತ್ಯಂ-ಪ್ರಸಿದ್ಧನಾದ, ಜಾತವೇದಸಂ-ಸಕಲ ಚರಾಚರಕ್ಕೂ ಕಾರಣಭೂತನಾದ, ಅಂತರ್ಯಾಮಿಯಾದ, ದೇವಂ ಸೂರ್ಯಂ-ಸೂರ್ಯದೇವನನ್ನು, ಕೇತವಃ-ಕೇತುವಿನಂತೆ ಬೆಳಗುತ್ತಿರುವ ದಿವ್ಯತ್ವಜ್ಞಾನಶಕ್ತ್ಯಾತ್ಮಶಕ್ತ್ಯಾದಿ ಗುಣಗಳು, ದೃಶೇ ವಿಶ್ವಾಯ-ಎಲ್ಲ ಜನರಿಗೂ ತೋರಿಸಲೋಸುಗ, ಉದ್ವಹಂತಿ-ವಹಿಸುತ್ತವೆ; (ಇಂತಹ ಪರಮಾತ್ಮನನ್ನು ಸ್ತುತಿಸುವೆನು.) ದೇವಾನಾಂ-ದೇವತೆಗಳಿಗೆ, ಚಿತ್ರಂ-ಆಶ್ಚರ್ಯಕರವಾದ, ಅನೀಕಂ-ಸೇನೆಯು, ಉದಗಾತ್-ಉದಯಿಸಿತು, ಮಿತ್ರಸ್ಯವರುಣಸ್ಯಾಗ್ನೇಃ-ಸೂರ್ಯ ವರುಣ ಅಗ್ನಿ ಮೊದಲಾದ ದೇವತೆಗಳಿಗೆ, ಚಕ್ಷುಃ-ಕಣ್ಣಿನಂತಿರುವ (ಜ್ಞಾನಪ್ರದನಾದ). ಸೂರ್ಯಃ-ಸೂರ್ಯಪರಮಾತ್ಮನು, ದ್ಯಾವಾಪೃಥಿವೀ ಅಂತರಿಕ್ಷಂ-ಸ್ವರ್ಗ ಭೂಮಿ ಆಕಾಶ

ಮುಂತಾದ ವಸ್ತುಸಮೂಹವನ್ನು, ಆಪ್ರಾ-ವ್ಯಾಪಿಸುವವನಾಗಿ, ಜಗತಃ-ಜಂಗಮಕ್ಕೂ, ತಸ್ಥುಷಃ-ಸ್ಥಾವರಕ್ಕೂ, ಆತ್ಮಾ-ಪ್ರಾಣಶಕ್ತಿಯಾಗಿರುವವನು (ಅಂತಹವನೇ ಉಪಾಸ್ಯನು) ತತ್-ಆ ಶ್ರುತಿಪ್ರಸಿದ್ಧನಾದ, ಚಕ್ಷುಃ-ಎಲ್ಲರಿಗೂ ಜ್ಞಾನವನ್ನು ಕೊಡುವವನಾದ, ದೇವಹಿತಂ-ದೇವತೆಗಳಿಗೆ ಒಳ್ಳೆಯದನ್ನು ಮಾಡುವವನಾದ, ಉಚ್ಚರತ್-ಉನ್ನತಹೊಂದಿದ್ದ, ಶುಕ್ರಂ-ಶುದ್ಧನಾದ ಸ್ವರೂಪವನ್ನು, ಪುರಸ್ತಾತ್-ಎದುರಿಗೆ, ಪಶ್ಯೇಮ ಶರದಶ್ಶತಂ-ನೂರುವರ್ಷಗಳು ಸಾಕ್ಷಾತ್ಕಾರಮಾಡುವೆವು, ಜೀವೇಮ ಶರದಶ್ಶತಂ-ನೂರುವರ್ಷಗಳು ಜೀವಿಸುವೆವು, ನಂದಾಮ ಶರದಶ್ಶತಂ-ನೂರುವರ್ಷಗಳು ಒಳ್ಳೆಯ ಮಕ್ಕಳೊಡನೆಯೂ ಶಿಷ್ಯರೊಡನೆಯೂ ಸಂತೋಷಪಡುವೆವು. ಮೋದಾಮ ಶರದಶ್ಶತಂ-ನೂರುವರ್ಷಗಳು ಸಂತೋಷದ ಜೀವನಾವಸ್ಥೆಯನ್ನು ಹೊಂದುವೆವು, ಭವಾಮ ಶರದಶ್ಶತಂ-ನೂರುವರ್ಷಗಳು ಉತ್ತರೋತ್ತರಾಭಿವೃದ್ಧಿಯನ್ನು ಹೊಂದುವೆವು, ಶೃಣವಾಮ ಶರದಶ್ಶತಂ-ನೂರುವರ್ಷಗಳು ಭಗವತ್ಕಥೆಗಳನ್ನು ಕೇಳುವೆವು. ಪ್ರಬ್ರವಾಮ ಶರದಶ್ಶತಂ-ನೂರುವರ್ಷಗಳು ಬಾಲ್ಯಕುವ್ಯಕ್ತಿಗಳೊಡನೆ ಗಾನವನ್ನು ಮಾಡುವೆವು, ಅಜೀತಾಸ್ಯಾಮ ಶರದಶ್ಶತಂ-ನೂರುವರ್ಷಗಳು ವೇದವಿರೋಧಿಗಳಿಂದ ಜಯಿಸಲ್ಪಡುವುದಿಲ್ಲ, ಚ-ಮತ್ತು, ಜ್ಯೋಕ್-ಬಹುಕಾಲ, ಸೂರ್ಯಂ-ಸೂರ್ಯಪರಮಾತ್ಮನನ್ನು, ದೃಶೇ-ನೋಡಲಿಚ್ಛಿಸುವೆವು, ಯಃ-ಯಾವನು, ಮಹತಃ-ದೊಡ್ಡದಾದ, ಅರ್ಣವಾತ್-ಸಮುದ್ರದ ದೆಸೆಯಿಂದ, ಉದಗಾತ್-ಉದಯವಾಗುವವನೋ, ಸರಿರಸ್ಯ ಮಧ್ಯಾತ್-ನೀರಿನ ನಡುವೆ, ವಿಭ್ರಾಜಮಾನಃ-ಚೆನ್ನಾಗಿ ಪ್ರಕಾಶಿಸುತ್ತಲಿರುವ, ವೃಷಭಃ-ಎಲ್ಲರಿಗೂ ಶ್ರೇಷ್ಠನಾದ, ಅಭಿಮುಖರಾದ ಭಕ್ತರ ಸಂಸಾರತಾಪವನ್ನು ನಿವಾರಣೆ ಮಾಡುವ, ಲೋಹಿತಾಕ್ಷಃ-ರಕ್ತವರ್ಣಾಕ್ಷನಾದ, ವಿಪಶ್ಚಿತ್-ಸರ್ವಜ್ಞನಾದ, ಸಃ-ಹಿಂದೆ ಹೇಳಿದ, ಸೂರ್ಯಃ-ಸೂರ್ಯನಾರಾಯಣಪರಮಾತ್ಮನು, ಮನಸಾ-ತನ್ನ ಸಂಕಲ್ಪದಿಂದ, ಮಾ-ನನ್ನನ್ನು, ಪುನಾತು-ಶೋಧಿಸಲಿ, ಪ್ರತಿಬಂಧಕನಿವೃತ್ತಿಯನ್ನು ಮಾಡಿ ಜ್ಞಾನುಭವವನ್ನು ಹೊಂದಲು ಯೋಗ್ಯನಾಗುವಂತೆ ಮಾಡಲಿ.

ಕಾಲದಿಂದುಂಟಾಗುವ ವ್ಯತ್ಯಾಸಗಳೊಂದೂ ಇಲ್ಲದ ಪರಮ ಪದದಲ್ಲಿಯೂ, ರಜೋಗುಣದಿಂದ ಕೂಡಿದ ಲೀಲಾವಿಭೂತಿಯಲ್ಲಿಯೂ ಸರ್ವದಾ ಇರುತ್ತಲಿರುವ ಪರಮಾತ್ಮನು, ಸಕಲಪ್ರಾಣಿಗಳನ್ನು ಅವರವರ ಕರ್ಮಕ್ಕೆ ತಕ್ಕಂತೆ ಪ್ರೇರಣೆಗೆಯ್ಯುತ್ತ, ಮೋಕ್ಷವನ್ನು ಬಯಸುವರಿಗೆ ಮೋಕ್ಷವನ್ನೂ ಸುಖಾನುಭವದಲ್ಲಿ ಆಸೆಯುಳ್ಳವರಿಗೆ ಐಹಿಕಫಲವನ್ನೂ ಕೊಡುತ್ತ, ಲೋಕವನ್ನು ಪರಿಪಾಲಿಸುತ್ತಲಿರುವನು. ಸರ್ವವ್ಯಾಪಕನಾದ, ಅಪ್ರಾಕೃತದಿವ್ಯ ಮಂಗಳವಿಗ್ರಹನಾದ ಪರಮಾತ್ಮನನ್ನು ಉಪಾಸನೆ ಮಾಡುವುದರಿಂದ ಚೇತನರು ಪರಮಪದವನ್ನು ಹೊಂದುವರು. ಪರಮಾತ್ಮನು ವೈಕುಂಠದಲ್ಲಿ ನಿತ್ಯರೊಡನೆಯೂ ಮುಕ್ತರೊಡನೆಯೂ, ನಿರತಿಶಯಾನಂದವನ್ನು ಅನುಭವಿಸುತ್ತ, ಭೂಲೋಕದಲ್ಲಿ ತಾಪತ್ರಯದಿಂದ ಬಳಲಿ ಬ್ರಹ್ಮಾಂಡದ ಸೊಗಸನ್ನೇ ಅರಿಯದ ಹೇಯವಾದ ಇಂದ್ರಿಯಾಸಕ್ತಿಯಲ್ಲಿ ನಿರತರಾಗಿ, ಬಹುಸಂಕಟಪಡುತಲಿರುವ ಪ್ರಾಣಿಗಳನ್ನು ಕಟಾಕ್ಷಿಸಿ ಪರಮಾಧಿಕವಾತ್ಸಲ್ಯಕಾರುಣ್ಯಾದಿಗುಣಪೂರ್ಣನಾದುದರಿಂದ, ಈ ಜೀವಿಗಳನ್ನು ರಕ್ಷಿಸಬೇಕೆಂದು ನಿಶ್ಚಯಿಸಿ ವೈಕುಂಠವನ್ನು ಬಿಟ್ಟು ಈ ಭೂಮಿಯಲ್ಲಿಯೇ ರಾಮಕೃಷ್ಣಾದ್ಯವತಾರಗಳನ್ನು ಮಾಡಿ, ಮತ್ಸ್ಯಕೂರ್ಮಗಳೆಂಬ ತನ್ನ ಮೂರ್ತಿಭೇದದಿಂದಲೂ, ಭರತಶತ್ರುಘ್ನರೆಂಬ ಪರಿಕರಗಳಿಂದಲೂ ಸೇನೆಯಂತೆ ಕಾಣಿಸಿಕೊಂಡು, ಹಗೆಗಳನ್ನು ಸಂಹರಿಸಿ ದೇವತೆಗಳಿಗೆ ಉತ್ಸಾಹವಾಗಿ, ತನ್ನ ಸಂಕಲ್ಪವನ್ನು ಪೂರಯಿಸಿದನು; ಸರ್ವವ್ಯಾಪಿಯಾಗಿ ಎಲ್ಲರಿಗೂ ಜ್ಞಾನಸನ್ನಿಹಿತನಾಗಿ, ಸಕಲರಿಗೂ ಹಿತವನ್ನು ಮಾಡುತ್ತ ರಕ್ಷಿಸುವ ಪರಮಾತ್ಮನನ್ನು ಧ್ಯಾನಪೂರ್ವಕವಾಗಿ ಕೀರ್ತಿಸುತ್ತ ಬಹುಕಾಲ ಐಶ್ವರ್ಯ ಸುಖವನ್ನನುಭವಿಸುವಂತೆ ತನಗೆ ಅನುಗ್ರಹಮಾಡಬೇಕೆಂದು ಚೇತನನು ಬೇಡಿಕೊಳ್ಳುವನು. ಸಕಲಕಲ್ಯಾಣಗುಣವಿಶಿಷ್ಟನಾದ ಪರಮಾತ್ಮನು ಚೇತನನಿಗೊದಗುವ ವಿಘ್ನಗಳನ್ನು ಹಾಳುಮಾಡಿ ಸ್ವಾನುಭವವನ್ನು ಹೊಂದುವುದಕ್ಕೆ ಶಕ್ತನನ್ನಾಗಿ ಮಾಡಬೇಕೆಂದು ಈ ಮಂತ್ರದಲ್ಲಿ ಚೇತನನು ಭಗವಂತನನ್ನು ಒಂದೇಮನಸ್ಸಿನಿಂದ ಪ್ರಾರ್ಥನೆ

ಮಾಡುವದು.

ಮಿಕ್ಕುದೆಲ್ಲವನ್ನು ಸಂಧ್ಯಾವಂದನೆಯಂತೆಯೇ ಮಾಡುವುದು.

ಮಾಧ್ಯಾಹ್ನಿಕಕ್ರಮಃ ಸಂಪೂರ್ಣಃ

—

—: **ಯಜುಸ್ಸಂಧ್ಯಾಭಾಷ್ಯವಿವರಣಂ ಸಂಪೂರ್ಣಂ** :—

ಅಚ್ಚಿನ ತಪ್ಪುಗಳು

ಪುಟ	ಪಙ್ಕ್ತಿ	ತಪ್ಪು	ಸರಿ
16	8	ಶೌಚಪ್ರಕ್ಷಿಪ್ತಃ	ಶೌಚಪ್ರಕ್ಷಿಪ್ತಃ
22	18-19	ಮತಯು	ಮ್ಯತಯು
24	8	ಕಾಲಿಯಾಸ್ಸ	ಕಾಲಿಯಾದ
,,	9	ದೇವತೆಕು	ದೇವತೆಕ್ಕ
,,	19	ಮಿಕ್ಕುದೆಲ್ಲವೂ	ಮಿಕ್ಕುದೆಲ್ಲವೂ
27	25	**ವಿಭ್ರಾಜಮಾನ**	**ವಿಭ್ರಾಜಮಾನ**
30	15	ಮಾಡ್ತಿ	ಮಾಡಿ
,,	16	[illegible]	ನಿತ್ಯಾಹ್ನ